MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 38 | ಮಂಗಳವಾರ : 25-11-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 38 | TUESDAY : 25-11-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00


## ಸುಪ್ರೀಂಕೋರ್ಟ್‌ನ ನೂತನ ಸಿಜೆಐ
## ನ್ಯಾ. ಸೂರ್ಯಕಾಂತ್ ಪ್ರಮಾಣ ವಚನ ಸ್ವೀಕಾರ



**ನವದೆಹಲಿ,ನ.24–** ಸುಪ್ರೀಂಕೋರ್ಟ್‌ನ 53ನೇ ಮುಖ್ಯ ನ್ಯಾಯಮೂರ್ತಿಯಾಗಿ ಸೂರ್ಯಕಾಂತ್ ಇಂದು ಪ್ರಮಾಣ ವಚನ ಸ್ವೀಕರಿಸಿದರು.

ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಧಿಕಾರ ಮತ್ತು ಗೌಪ್ಯತೆ ಬೋಧಿಸಿದರು.

ಈ ವೇಳೆ ಪ್ರಧಾನಿ ನರೇಂದ್ರ ಮೋದಿ, ಸಚಿವರಾದ ಅಮಿತ್ ಶಾ, ಜೆಪಿ ನಡ್ಡಾ, ನಿರ್ಗಮಿತ ಮುಖ್ಯನ್ಯಾಯಮೂರ್ತಿ ಬಿ. ಆರ್ ಗವಾಯಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಮುಖ್ಯನ್ಯಾಯಮೂರ್ತಿಯಾಗಿ ಭೂಷಣ್ ಆರ್. ಗವಾಯಿ ನಿನ್ನೆ ಅಧಿಕಾರದಿಂದ ನಿವೃತ್ತರಾಗಿದ್ದರು. ಈ ಹಿನ್ನೆಲೆಯಲ್ಲಿ ಇಂದು ನ್ಯಾಯಮೂರ್ತಿ ಸೂರ್ಯಕಾಂತ್ ಅಧಿಕಾರ ಸ್ವೀಕರಿಸಿದರು. ಮುಂದಿನ 14 ತಿಂಗಳ ಕಾಲ ಮುಖ್ಯನ್ಯಾಯಮೂರ್ತಿಯಾಗಿ ಅಧಿಕಾರದಲ್ಲಿರಲಿದ್ದಾರೆ.

ಇದಕ್ಕೂ ಮೊದಲು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂವಿಧಾನದ 124(2) ನೇ ವಿಧಿಯ ಅಡಿಯಲ್ಲಿ ನ್ಯಾಯಮೂರ್ತಿ ಕಾಂತ್ ಅವರನ್ನು ಮುಖ್ಯನ್ಯಾಯಮೂರ್ತಿ ಅವರನ್ನು ನೇಮಕ ಮಾಡಿದ್ದರು, ನಿರ್ಗಮಿತ ಸಿಜೆಐ ಗವಾಯಿ ಅವರ ಶಿಫಾರಸಿನ ಮೇರೆಗೆ, ಅವರು ಉತ್ತರಾಧಿಕಾರಿಯನ್ನು ಹೆಸರಿಸುವಲ್ಲಿ ಹಿರಿತನದ ಸಂಪ್ರದಾಯವನ್ನು ಎತ್ತಿಹಿಡಿದ್ದರು.

ಮಹತ್ವದ ತೀರ್ಪಿನಲ್ಲಿ (2ನೇ ಪುಟಕ್ಕೆ)

## ಮಕ್ಕಳ ಜನನದ ಮಧ್ಯೆ ಕನಿಷ್ಟ ಮೂರು ವರ್ಷಗಳ ಕಾಲ ಅಂತರವಿಡಲು ಸಹಾಯ
# ತಾತ್ಕಾಲಿಕ ಗರ್ಭನಿರೋಧಕ ವಿಧಾನ 'ಅಂತರ' ಚುಚ್ಚುಮದ್ದು ಉಪಯುಕ್ತ: ವೈದ್ಯರ ಸಲಹೆ

**ಯುವಮಾರ್ಗ ಸುದ್ದಿ**

**ರಾಯಚೂರು,ನ.24–** 'ಅಂತರ' ಎಂಬ ಹೆಸರಿನಿಂದ ಕರೆಯಲ್ಪಡುವ ತಾತ್ಕಾಲಿಕ ಗರ್ಭನಿರೋಧಕ ವಿಧಾನವಾದ ಅಂತರ ಚುಚ್ಚುಮದ್ದು ಅತ್ಯಂತ ಸರಳವಾಗಿದೆ. ಯಾವುದೇ ಅನಾನೂಕೂಲತೆಯಾಗದಂತೆ ದಂಪತಿಯ ನಿರ್ಧಾರದ ಮೇರೆಗೆ ಮೊದಲ ಹೆರಿಗೆ ನಂತರ ಮಗುವಿನ ತಾಯಿಯು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಪಡೆಯಬಹುದಾದ ಚುಚ್ಚುಮದ್ದನ್ನು ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿಗಳು ತಿಳಿಸಿದ್ದಾರೆ.

ಅಂತರ ಗರ್ಭನಿರೋಧಕ ಚುಚ್ಚುಮದ್ದನ್ನು ರಾಯಚೂರು ಜಿಲ್ಲೆಯ ಎಲ್ಲ ತಾಲೂಕಿನ ತಾಲೂಕು ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ವಿವಿಧ ಸರ್ಕಾರಿ ಆರೋಗ್ಯ ಕೇಂದ್ರಗಳು ಹಾಗೂ ರೀಮ್ಸಲ್ಲಿ ಅಂತರ ಚುಚ್ಚುಮದ್ದನ್ನು ಉಚಿತವಾಗಿ ಒದಗಿಸಲಾಗುತ್ತದೆ. ಒಂದು ಡೋಸ್ ಮೂಲಕ ಮೂರು ತಿಂಗಳವರೆಗೆ ಗರ್ಭಧಾರಣೆ ತಡೆಯಬಹುದಾಗಿದೆ. ಇದು ಭಾರತ ಸರ್ಕಾರದ ಕುಟುಂಬ ಯೋಜನಾ ಕಾರ್ಯಕ್ರಮದ ಭಾಗವಾಗಿ ರಾಜ್ಯ ಸರಕಾರದ ಮಾರ್ಗದರ್ಶನದಲ್ಲಿ ರಾಯಚೂರು ಜಿಲ್ಲೆಯ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಸಾರ್ವಜನಿಕರಿಗೆ ಲಭ್ಯವಿದೆ. ಅಂತರ ಎಂಬುದು ಸರಕಾರ ಸೂಚಿತ ಅಧಿ ಕೃತ ಹೆಸರಾಗಿದೆ. ಇದು ಹೆಚ್ಚು ಪರಿಣಾಮಕಾರಿ, ದೀರ್ಘಕಾಲ ಕಾರ್ಯನಿರ್ವಹಿಸುವ ರಿವರ್ಸಿಬಲ್ ಗರ್ಭನಿರೋಧಕ ವಿಧಾನವಾ ಗಿದ್ದು, ಅಂತರ ಇಂಜೆಕ್ಷನ್‌ನನ್ನು ಪ್ರತಿ ಮೂರು ತಿಂಗಳುಗಳಿಗೊಮ್ಮೆ ವರ್ಷದಲ್ಲಿ 4 ಸಾರಿ ಪಡೆದಲ್ಲಿ ಕನಿಷ್ಟ (2ನೇ ಪುಟಕ್ಕೆ)





## ಅನುದಾನ ಬಂದ್ರೂ ಕಾಮಗಾರಿ ಆರಂಭಿಸದ ಅಧಿಕಾರಿಗೆ ಸಚಿವ ಬೋಸರಾಜು ತರಾಟೆ



**ಯುವಮಾರ್ಗ ಸುದ್ದಿ**

**ಸಿರವಾರ,ನ.24–** ತಾಲ್ಲೂಕಿನ ಮರಾಟ ಗ್ರಾಮದಲ್ಲಿ ನಿನ್ನೆ (ಭಾನುವಾರ) ಈ ಘಟನೆ ನಡೆದಿದೆ. ಮರಾಟ ಗ್ರಾಮದ ಶಾಲಾ ಕಟ್ಟಡ ಉದ್ಘಾಟನೆಗೆ ಸಚಿವರು ಆಗಮಿಸಿದ್ದರು. ಈ ವೇಳೆ ಮಾನ್ವಿ ಶಾಸಕ ಹಂಪಯ್ಯ ನಾಯಕ್ ಹಾಗೂ ಸಂಸದ ಕುಮಾರ್ ನಾಯಕ್ ಕೂಡ ಸಾಥ್ ನೀಡಿದ್ದರು.

**2 ಕೋಟಿ ರೂ. ಅನುದಾನ ಬಿಡುಗಡೆಯಾದ್ರೂ ಕಾಮಗಾರಿ ಇಲ್ಲ!**–ಕಾರ್ಯಕ್ರಮದ ವೇಳೆ ಮರಾಟ ಹಾಗೂ ಬಾಗಲವಾಡ ಗ್ರಾಮಗಳ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಬೈಕ್ ಸವಾರರು ಬಿದ್ದು ಗಾಯಗೊಳ್ಳುತ್ತಿದ್ದಾರೆ ಎಂದು ಸ್ಥಳೀಯರು ಸಚಿವರಿಗೆ ದೂರು ನೀಡಿದರು. ಸರ್ಕಾರದಿಂದ ಈ ರಸ್ತೆಗಾಗಿ ಈಗಾಗಲೇ 2 ಕೋಟಿ ರೂಪಾಯಿ ಅನುದಾನ ಬಿಡುಗಡೆಯಾಗಿದ್ದರೂ, ಕಾಮಗಾರಿ ಆರಂಭಿಸದ ವಿಷಯ ತಿಳಿದು ಸಚಿವರು ಕೋಪಗೊಂಡರು.

**ಅಧಿಕಾರಿಗೆ ಹಿಗ್ಗಾಮುಗ್ಗಾ ತರಾಟೆ:**ಸ್ಥಳದಲ್ಲೇ ಇದ್ದ ಕೆಆರ್‌ಡಿಎಲ್ (ಏಖಖಆಐ) ಎಇಇ ಹನುಮಂತರಾಯ ಅವರನ್ನು ಕರೆದ ಸಚಿವರು, ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡರು. ಸರ್ಕಾರದಿಂದ ಹಣ ಬಂದಿದ್ರೂ ಯಾಕ್ರಯ್ಯಾ ಕೆಲ್ಸ ಮಾಡಿಲ್ಲ? ಕತ್ತೆ ಕಾಯ್ತಿದ್ದೀರಾ ಏನು? ಮನುಷ್ಯ ಇದ್ದಿ.. ಏನ್ ಇದ್ದಿ? ಜನ ರಾತ್ರಿ ಎಲ್ಲಾ ಹದಗೆಟ್ಟ ರಸ್ತೆಯಲ್ಲೇ ಓಡಾಡಬೇಕಾ? ನಾಳೆ ಬೆಳಿಗ್ಗೆಯೇ ರಸ್ತೆ ಕಾಮಗಾರಿ ಶುರುವಾಗ್ಬೇಕು. ಇಲ್ಲಾಂದ್ರೆ ಕಟ್ಟಿ ಹಾಕಿ ಒದಿತೀನಿ ನೋಡು. ನಿನ್ನ ಸಸ್ಪೆಂಡ್ ಏನೂ ಮಾಡಲ್ಲ, ನೇರವಾಗಿ ಎನ್ಕ್ವಾಯರಿ ಮಾಡ್ಸಿ ಜೈಲಿಗೆ ಹಾಕಿಸ್ತೇನೆ ನೋಡು.. ಎಂದು ಸಚಿವರು ಎಇಇಗೆ ಚಳಿ ಬಿಡಿಸಿದ್ದಾರೆ.

## ಡಿ. 21 ರಂದು ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಅಂಗವಾಗಿ ತರಬೇತಿ ಕಾರ್ಯಕ್ರಮ: ಡಾ. ಸುರೇಂದ್ರ ಬಾಬು

**ಯುವಮಾರ್ಗ ಸುದ್ದಿ**

ಮಾನ್ವಿ: ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಶ್ವ ಆರೋಗ್ಯ ಸಂಸ್ಥೆ ಸಹಯೋಗದಲ್ಲಿ ನಡೆದ ಜಿಲ್ಲಾ ಮಟ್ಟದ ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಯವರಿಗೆ ಪಲ್ಸ್ ಪೋಲಿಯೋ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಸುರೇಂದ್ರ ಬಾಬು ಮಾತನಾಡಿ 2011 ರ ಜ. 13 ರಂದು ಭಾರತದಲ್ಲಿ ಪೋಲಿಯೋ ಕೊನೆಯ ಪ್ರಕರಣ ವರದಿಯಾದ ನಂತರ ಇಲ್ಲಿಯ ವರೆಗೆ ನಿರಂತರ ನಿಗಾವಣೆಯೊಂದಿಗೆ ಮಕ್ಕಳಿಗೆ ವಯಸ್ಸಿಗನುಗುಣವಾಗಿ ಎರಡು ಹನಿ ಪೋಲಿಯೋ ಲಸಿಕೆ ಹಾಕುವ ಮೂಲಕ ಸತತ 14 (2ನೇ ಪುಟಕ್ಕೆ)



## ಕೃಷಿ ಉಪನಿರ್ದೇಶಕರ ಕಚೇರಿ ಸ್ಥಳಾಂತರ ವಿರೋಧಿಸಿ ಧರಣಿ ಆರಂಭ

**ಯುವಮಾರ್ಗ ಸುದ್ದಿ**

**ಲಿಂಗಸುಗೂರು,ನ.24–** ಪಟ್ಟಣದಿಂದ ಸಿಂಧನೂರಿಗೆ ಕೃಷಿ ಉಪ ನಿರ್ದೇಶಕರ ಕಚೇರಿ ಸ್ಥಳಾಂತರ ವಿರೋಧಿಸಿ ಕೃಷಿ ಕಚೇರಿ ಮುಂದೆ ಸೋಮವಾರ ಕರ್ನಾಟಕ ರೈತ ಸಂಘದ ಪದಾಧಿಕಾರಿಗಳು ಧರಣಿ ಆರಂಭಿಸಿದರು.

ಲಿಂಗಸುಗೂರು ಕೃಷಿ ಉಪನಿರ್ದೇಶಕರ ಕಚೇರಿ ಸಿಂಧನೂರಿಗೆ ಸ್ಥಳಾಂತರ ಮಾಡಿ, 2024ರ ಅಗಸ್ಟ್19ರಂದು ಸರಕಾರದ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದರು. ಈಗ ಮತ್ತೆ ಕೃಷಿ ಉಪನಿರ್ದೇಶಕರು ಬೆಂಗಳೂರು ಇವರು, ಇಲ್ಲಿನ ಕೃಷಿ ಉಪನಿರ್ದೇಶಕರ ಕಚೇರಿ–2 ಹುದ್ದೆಗಳ ಸಮೇತ ಸ್ಥಳಾಂತರ ಮಾಡುವಂತೆ ಆದೇಶಿಸಿರುವುದು ಖಂಡನೀಯ, ಲಿಂಗಸುಗೂರು ಸಿಂಧನೂರಿನಿಂದ 90 ಕಿ.ಮೀ. ಅಂತರವಿದ್ದು, ತಾಲೂಕಿನಲ್ಲಿ ಹೆಚ್ಚು ಕೃಷಿ ಭೂಮಿ ಇದೆ ಎಂದು ಸರಕಾರಕ್ಕೆ ಸುಳ್ಳು ಮಾಹಿತಿ ನೀಡಿ ಕಚೇರಿ ಸ್ಥಳಾಂತರಕ್ಕೆ ಹುನ್ನಾರ ನಡೆದಿದೆ. ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಸ್ಪಂದನೆ ಸಿಗುತ್ತಿಲ್ಲ.

ನಿರಂತರವಾಗಿ ನಡೆಯುವ ಹೋರಾಟ ಸರಕಾರದಿಂದ ಆದೇಶ ಬರು ವವರೆಗೂ ನಿಲ್ಲುವುದಿಲ್ಲ ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿಸಂಘದ ಜಿಲ್ಲಾಧ್ಯಕ್ಷ ಶಿವಪುತ್ರಗೌಡ ನಂದಿಹಾಳ, ತಾಲೂಕ ಅಧ್ಯಕ್ಷ ದುರ್ಗಾಪ್ರಸಾದ, ಮುಖಂಡರಾದ ಮಹ್ಮದ್ ಖಾಜಾಸಾಬ, ದುರುಗಪ್ಪ, ಬಸಣ್ಣ ಕೋತ, ಲಾಲ್‌ಸಾಬ, ಲಕ್ಷ್ಮಣ, ರಮೇಶ, ಮಹಾಂತೇಶ ಸೇರಿ ಇತರರಿದ್ದರು.



# ಜೋಳ ಖರೀದಿ ಕೇಂದ್ರಗಳ ಸಂಖ್ಯೆಯಲ್ಲಿ ಕಡಿತ :ಜೋಳ ಬೆಳೆದ ರೈತರಲ್ಲಿ ಆತಂಕ

**ಯುವಮಾರ್ಗ ಸುದ್ದಿ**

**ಮಾನ್ವಿ,ನ.24–** ತಾಲೂಕಿನಲ್ಲಿ ರೈತರು ತಾವು ಬೆಳೆದ ಉತ್ಪನ್ನಗಳಿಗೆ ಸರಿಯಾದ ಬೆಲೆ ದೊರೆಯದೆ ಸಂಕಷ್ಟದಲ್ಲಿರುವ ಸಮಯದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡುವುದಕ್ಕೆ ಖರೀದಿ ಕೇಂದ್ರಗಳ ಸ್ಥಾಪನೆಗೆ ಮುಂದಾಗಿದ್ದರು ಕೂಡ ಅದಿಕಾರಿಗಳ ಅವೈಜ್ಞಾನಿಕ ನಿರ್ಣಯಗಳಿಂದಾಗಿ ಈ ಖರೀದಿ ಕೇಂದ್ರಗಳು ರೈತರಿಗೆ ಅನುಕೂಲವಾಗುತ್ತಿಲ್ಲ ಹತ್ತಿ ಬೆಳೆಗೆ ಮಾರುಕಟ್ಟೆಯಲ್ಲಿ ಬೆಂಬಲಬೆಲೆ ದೊರಕಿಸುವುದಕ್ಕಾಗಿ ಮಾನ್ವಿ ಪಟ್ಟಣದಲ್ಲಿ ಪ್ರಾರಂಭಿಸಲಾದ ಹತ್ತಿ ಖರೀದಿ ಕೇಂದ್ರಗಳಲ್ಲಿ ರೈತರು ತಾವು ಬೆಳೆದ ಹತ್ತಿಯನ್ನು ಮಾರಾಟ ಮಾಡುವುದಕ್ಕಾಗಿ ತಾಂತ್ರಿಕ ತೊಂದರೆಗಳಿಂದ ನೋದಾಯಿಸುವುದಕ್ಕೆ ಸಾಧ್ಯವಾಗದೆ ಇರುವುದರಿಂದ ಹತ್ತಿಯನ್ನು ಬೆಂಬಲ ಬೆಲೆಯಲ್ಲಿ ಮಾರಾಟ ಮಾಡುವುದಕ್ಕೆ ಆಗದೆ ರೈತರು ನಷ್ಟ ಅನುಭವಿಸುವಂತಾಗಿದೆ

ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರೈತರು ಮಳೆ ಹಾಗೂ ಅರೆ ನೀರಾವರಿ ಆಶ್ರ ಯದಲ್ಲಿ ಜೋಳವನ್ನು ಬೆಳೆದಿದ್ದು, ಈಬಾರಿ ಉತ್ತಮ ಇಳುವರಿ ನಿರೀಕ್ಷೆಯಲ್ಲಿರುವ ರೈತರಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಂಬಲ ಬೆಲೆ ಇಲ್ಲದೆ ಇರುವುದರಿಂದ ಜೋಳ ಖರೀದಿ ಕೇದ್ರಗಳತ್ತ ರೈತಮುಖ ಮಾಡಿರುವ ಸಮಯದಲ್ಲಿ ತಾಲೂಕಿಗೆ ಕೇವಲ 3 ಖರೀದಿ ಕೇಂದ್ರಗಳನ್ನು ತೆರೆಯುವುದಕ್ಕೆ ಅನುಮತಿ ನೀಡಿರುವದರಿಂದ ರೈತರಿಗೆ ಮುಂದಿನ ದಿನಗಳಲ್ಲಿ ತಾವು ಬೆಳೆದ ಜೋಳವನ್ನು ಜೋಳ ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡುವುದಕ್ಕೆ ತೊಂದರೆಯಾಗಲಿದೆ.

ತಾಲೂಕಿನಲ್ಲಿ ಹೆಚ್ಚು ಜೋಳವನ್ನು ಬೆಳೆಯುವ (ಪೋತ್ನಾಳ) ಹಾಗೂ ಹಿರೆಕೋಟ್ನೆಕಲ್ ಹೋಬಳಿಗೆ ಜೋಳ ಖರೀದಿ ಕೇಂದ್ರವನ್ನು ಮಂಜೂರು ಮಾಡದೆ ಮಾನ್ವಿ ಪಟ್ಟಣದಲ್ಲಿನ ಟಿ.ಎ.ಪಿ.ಸಿ.ಎಂ.ಸಿ. ಕೇಂದ್ರ ,ಕುರ್ಡಿ ಕೇಂದ್ರ, ಜಾನೆಕಲ್ ಕೇಂದ್ರಗಳಲ್ಲಿ ಮಾತ್ರ ಜೋಳವನ್ನು ಮಾರಾಟ ಮಾಡಬೇಕಾಗುವುದರಿಂದ ಜೋಳ ಬೆಳೆಯುವ ಪ್ರದೇಶದ ರೈತರು ದೂರಾದ ಖರೀದಿ ಕೇಂದ್ರಗಳಿಗೆ ತಮ್ಮ ಜೋಳವನ್ನು ತೆಗೆದುಕೊಂಡು ಹೋಗಬೇಕಾಗಿರುವುದರಿಂದ ಸಾಗಣಿಕೆ ವೆಚ್ಚ ಹೊರೆಯಾಗುತ್ತದೆ ಅದ್ದರಿಂದ ಕಳೆದ ಬಾರಿಯಂತೆ ಮಾನ್ವಿ ಪಟ್ಟಣದ ಟಿಎಪಿಸಿಎಂಎಸ್ ಸೇರಿದಂತೆ ಪೋತ್ನಾಳ, ಬ್ಯಾಗವಾಟ್, ಹಿರೇಕೋಟ್ನೆಕಲ್, ತಡಕಲ್ ,ನಕ್ಕುಂದಿ, ತೋರಣದಿನ್ನಿ, ಡೋಣಮರಡಿ ಸೇರಿದಂತೆ 9 ಉಪ ಕೇಂದ್ರಗಳಲ್ಲಿ ಜೋಳ ಖರೀದಿಸಲಾಗಿತ್ತು.

ಆದರೆ ಈ ಬಾರಿ ಪ್ರಾಥಮಿಕ ಕೃಷಿ ಪತ್ತಿನ ಸಂ ಘಗಳು ನಷ್ಟದಲ್ಲಿರುವ ನೆಪ ಹೇಳಿ 6 ಖರೀದಿ ಕೇಂದ್ರಗಳನ್ನು ಸ್ಥಗಿತಗೊಳಿಸಿರುವುದು ರೈತರಲ್ಲಿ ಅತಂಕ ಮೂಡಿಸಿದೆ.



**ತಾಲೂಕಿನಲ್ಲಿ ಈ ಬಾರಿ ತೃಪ್ತಿಕರವಾದ ಮಳೆಯಾಗಿದ್ದು ಜೋಳದ ದಾಸ್ತಾನು ಹೆಚ್ಚಾಗಿ ಕೇವಲ ಮೂರು ಖರೀದಿ ಕೇಂದ್ರಗಳಿಂದ ಖರೀದಿಸಲು ಸಾಧ್ಯವಿಲ್ಲ. ಕಳೆದ ಬಾರಿಯಂತೆ ಉಳಿದಂತೆ ಎಲ್ಲಾ ಖರೀದಿ ಕೇದ್ರಗಳನ್ನು ಮರು ಸ್ಥಾಪಿಸಲು ಕೋರಿಕೆ ಸಲ್ಲಿಸಲಾಗಿದೆ ಎಂದು. ತಾಲೂಕು ಜೋಳ ಖರೀದಿ ಕೇಂದ್ರದ ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರಾದ ತಹಸೀಲ್ದಾರ್ ಭೀಮರಾಯ ಬಿ ರಾಮಸಮುದ್ರ ರವರ ಸುದ್ದಿಗಾರರೊಂದಿಗೆ ಮಾಹಿತಿ ನೀಡಿದ್ದಾರೆ.**



**ತಾಲೂಕಿನ ಹಿರೇಕೊಟ್ನೆಕಲ್ ಹೋಬಳಿಯ (ಪೋತ್ನಾಳ)ಹಳ್ಳಕ್ಕೆ ಹೊಂದಿಕೊಂಡಿರುವ ದೊತರಬಂಡಿ,ಉಟಕನೂರು, ಉದ್ಬಾಳ್, ತಡಕಲ್, ಜಿನ್ನೂರು, ಮುದ್ದಂಗುಡ್ಡಿ, ಖರಾಬದಿನ್ನಿ, ದೇವಿಪುರ, ನಲ್ಗಂದಿನ್ನಿ, ಜಾಗೀರಪನ್ನೂರು, ಸೇರಿದಂತೆ 20 ಕ್ಕೂ ಹೆಚ್ಚು ಗ್ರಾಮಗಳಲ್ಲಿ ರೈತರು ಜೋಳ ಬೆಳೆಯುತ್ತಿದ್ದು ಮಾನ್ವಿ ತಾಲೂಕಿನಲ್ಲಿಯೇ ಅತಿ ಹೆಚ್ಚು ಶೇ.80 ಕ್ಕೂ ಹೆಚ್ಚಿನ ಪೋತ್ನಾಳ ಭಾಗದಲ್ಲಿ ಜೋಳ ಬೆಳೆಯಲಾಗುತ್ತಿದೆ.ಕಳೆದ ಬಾರಿ 9 ಕೇಂದ್ರಗಳಲ್ಲಿ ಜೋಳ ನೋಂದಣಿ ಸೇರಿದಂತೆ ಖರೀದಿಸುವವರಲ್ಲಿ ರೈತರು ಹರಸಾಹಸ ಪಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಈ ವರ್ಷ ಕೇವಲ ಮೂರು ಜೋಳ ಖರೀದಿ ಕೇಂದ್ರಗಳನ್ನು ಸ್ಥಾಪಿಸಿರುವುದರಿಂದ ರೈತರಿಗೆ ತೀವ್ರವಾದ ಅನ್ಯಾಯ ಮಾಡಿದಂತಾಗುತ್ತದೆ ಈ ಅವೈಜ್ಞಾನಿಕವಾಗಿರುವ ಅದೇಶವನ್ನು ಹಿಂಪಡೆಯಬೇಕು ಈ ಭಾಗದಲ್ಲಿ ಹೆಚ್ಚು ಖರೀದಿ ಕೇಂದ್ರಗಳನ್ನು ನೀಡಬೇಕು ಮಾನ್ವಿ ಪಟ್ಟಣದ ಟಿಎಪಿಸಿಎಂಎಸ್, ಜಾನೇಕಲ್ ಹಾಗೂ ಕುರ್ಡಿ ಕೇಂದ್ರಗಳಲ್ಲಿ ಜೋಳ ಖರೀದಿಗೆ ಆನ್‌ಲೈನ್ ನೊಂದಣಿ ಪ್ರಾರಂಭಿ ಸಲಾಗುವುದೆಂಬ ಮಾಹಿತಿ ಇದ್ದು. ಅಧಿಕಾರಿಗಳು ಈ ಮೊದಲಿನ ಖರೀದಿಕೇಂದ್ರಗಳನ್ನು ಸ್ಥಾಪಿಸಿ. ನೊಂದಣಿ ಪ್ರಾರಂಬಿಸ ಬೇಕು ರೈತರು ಬೀದಿಗಿಳಿದು ತೀವ್ರ ಹೋರಾಟ ನಡೆಸುವ ಮುನ್ನವೇ ಸರ್ಕಾರ ಎಚ್ಚೆತ್ತು ರೈತರಿಗೆ ನ್ಯಾಯ ಒದಗಿಸಬೇಕು ಎಂದು. ಅಖಿಲ ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘ (ರಿ) ರಾಯಚೂರು. ಜಿಲ್ಲಾಧ್ಯಕ್ಷರಾ ದ ಕೆ, ನಾಗನಗೌಡ ಖರಾಬದಿನ್ನಿ ಆಗ್ರಹಿ ಸಿದರೆ.**



**ಅತಿ ಹೆಚ್ಚು ಜೋಳ ಬೆಳೆಯುವ (ಪೋತ್ನಾಳ) ಹಿರೇಕೊಟ್ನೆಕಲ್ ಹೋಬಳಿಯ ರೈತರು ಮಾನ್ವಿ ಪಟ್ಟಣದ ಜೋಳ ಖರೀದಿ ಕೇಂದ್ರಕ್ಕೆ ಜೋಳವನ್ನು ದಸಾಗಿಸುವುದಕ್ಕೆ ಅಂದಾಜು 3000 ಪ್ರತಿ ಟ್ಯಾಕ್ಟರ್ ಗೆ ತಗುಲುತ್ತದೆ ಅಲ್ಲದೆ ಕನಿಷ್ಟ ವಾರಗಟ್ಟಲೆ ರೈತರು ಸಾರತಿಯ ಸಾಲಿಗಾಗಿ ನಿಲ್ಲಬೇಕಾಗುತ್ತದೆ.ನೊಂದಣಿಯಾದ ರೈತ ವಾರಗಟ್ಟಲೆ ಪಟ್ಟಣದ ಟಿಎಪಿಸಿ ಎಂಎಸ್ ಆವರಣದಲ್ಲಿ ಊಟ ನಿದ್ದೆ ಬಿಟ್ಟು ಕಾಯ್ದಿರುವ ಉದಾಹರಣೆ ಇದೆ.**

ಮೊದಲನೇಯ ಪುಟದಿಂದ

# ಸುಪ್ರೀಂಕೋರ್ಟ್‌ನ ನೂತನ ಸಿಜೆಐ

## ನ್ಯಾ. ಸೂರ್ಯಕಾಂತ್ ಪ್ರಮಾಣ ವಚನ ಸ್ವೀಕಾರ

ಭಾಗಿ–ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ 370 ನೇ ವಿಧಿ ರದ್ದುಪಡಿಸುವುದು, ಬಿಹಾರದ ಮತದಾರರ ಪಟ್ಟಿ ಪರಿಷ್ಕರಣೆ ಮತ್ತು ಪೆಗಾಸಸ್ ಸ್ಪೈವೇರ್ ಪ್ರಕರಣದ ಕುರಿತು ಹಲವಾರು ಮಹತ್ವದ ತೀರ್ಪುಗಳು ಮತ್ತು ಆದೇಶಗಳಲ್ಲಿ ಭಾಗವಾಗಿದ್ದಾರೆ ಎಂಬುದು ಗಮನಾರ್ಹ.

ಕಳೆದ ಅಕ್ಟೋಬರ್ 30 ರಂದು ಮುಂದಿನ ಮುಖ್ಯನ್ಯಾಯಮೂರ್ತಿಯಾಗಿ ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ನೇಮಕ ಮಾಡಿದ್ದರು. ಸುಮಾರು 15 ತಿಂಗಳುಗಳ ಕಾಲ ಈ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ. 2027 ರ ಫೆಬ್ರವರಿ 9ರಂದು 65 ವರ್ಷ ವಯಸ್ಸನ್ನು ತಲುಪಿದ ನಂತರ ಅಧಿಕಾರದಿಂದ ಕೆಳಗಿಳಿಯುತ್ತಾರೆ.

1962ರ ಫೆಬ್ರವರಿ 10 ರಂದು ಹರಿಯಾಣದ ಹಿಸಾರ್ ಜಿಲ್ಲೆಯಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ನ್ಯಾಯಮೂರ್ತಿ ಸೂರ್ಯ ಕಾಂತ್, ವಕೀಲ ಹುದ್ದೆಯಿಂದ ದೇಶದ ಅತ್ಯುನ್ನತ ನ್ಯಾಯಾಂಗ ಹುದ್ದೆಗೆ ಏರಿದ ಹಿರಿಮೆಗೆ ಪಾತ್ರರಾಗಿದ್ದಾರೆ.

ಇದರ ಜೊತೆಗೆ ರಾಷ್ಟ್ರೀಯ ಪ್ರಾಮುಖ್ಯತೆ ಮತ್ತು ಸಾಂವಿಧಾನಿಕ ವಿಷಯಗಳ ಹಲವಾರು ತೀರ್ಪುಗಳು ಮತ್ತು ಆದೇಶಗಳ ಭಾಗವಾಗಿದ್ದಾರೆ.2011 ರಲ್ಲಿ ಕುರುಕ್ಷೇತ್ರ ವಿಶ್ವವಿದ್ಯಾಲಯದಿಂದ ಕಾನೂನು ಸ್ನಾತಕೋತ್ತರ ಪದವಿಯಲ್ಲಿ 'ಪ್ರಥಮ ದರ್ಜೆಯಲ್ಲಿ ಪ್ರಥಮ' ಸ್ಥಾನ ಪಡೆದ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನಲ್ಲಿ ಹಲವಾರು ಗಮನಾರ್ಹ ತೀರ್ಪುಗಳನ್ನು ಬರೆದ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರನ್ನು 2018 ಅಕ್ಟೋಬರ್ 5ರಂದು ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕೈಗೊಳ್ಳುವ ಚುನಾವಣಾ ಸಮಿತಿಯ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ನಡೆಸುವಾಗ, ಬಿಹಾರದಲ್ಲಿ ಕರಡು ಮತದಾರರ ಪಟ್ಟಿಯಿಂದ ಹೊರಗುಳಿದ 65 ಲಕ್ಷ ಮತದಾರರ ವಿವರಗಳನ್ನು ಬಹಿರಂಗಪಡಿಸುವಂತೆ ನ್ಯಾಯಮೂರ್ತಿ ಸೂರ್ಯ ಕಾಂತ್ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದರು.

ತಳಮಟ್ಟದ ಪ್ರಜಾಪ್ರಭುತ್ವ ಮತ್ತು ಲಿಂಗ ನ್ಯಾಯವನ್ನು ಒತ್ತಿಹೇಳುವ ಆದೇಶದಲ್ಲಿ, ಕಾನೂನುಬಾಹಿರವಾಗಿ ಪದಚ್ಯುತಗೊಳಿಸಲಾದ ಮಹಿಳಾ ಸರಪಂಚರನ್ನು ಪುನಃ ನೇಮಿಸಿದ ಪೀಠದ ನೇತೃತ್ವ ವಹಿಸಿದ್ದ ಅವರು, ಈ ವಿಷಯದಲ್ಲಿ ಲಿಂಗ ಪಕ್ಷಪಾತವನ್ನು ಟೀಕಿಸಿದರು.

# ತಾತ್ಕಾಲಿಕ ಗರ್ಭನಿರೋಧಕ ವಿಧಾನ 'ಅಂತರ' ಚುಚ್ಚುಮದ್ದು ಉಪಯುಕ್ತ: ವೈದ್ಯರ ಸಲಹೆ

ಒಂದು ವರ್ಷ ಗರ್ಭಧಾರಣೆ ಮುಂದೂಡಲು ಸಹಾಯಕವಾಗುವುದು. ಪ್ರಸ್ತುತ ಏಪ್ರಿಲ್‌ನಿಂದ ಇಲ್ಲಿವರೆಗೆ 1037 ಮಹಿಳೆಯರು ಫಲಾನುಭವಿಗಳಾಗಿ ಚುಚ್ಚುಮದ್ದು ಪಡೆಯುತ್ತಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರ ಬಾಬು ತಿಳಿಸಿದ್ದಾರೆ.

**ತಪಾಸಣೆಯ ನಂತರ ಇಂಜೆಕ್ಷನ್:** ಇದು ಮಾಂಸಖಂಡದ ಒಳಗೆ ನೀಡುವ ಇಂಜೆಕ್ಷನ್ ಆಗಿದ್ದು, ಸಾಮಾನ್ಯವಾಗಿ ಮಹಿಳೆಯ ಆರೋಗ್ಯ ತಪಾಸಣೆಯ ನಂತರ ತರಬೇತಿ ಪಡೆದ ಆರೋಗ್ಯ ಸಿಬ್ಬಂದಿಯವರು ವೈದ್ಯರ ನೇತೃತ್ವದಲ್ಲಿ ತೋಳು ಅಥವಾ ತೊಡೆಯಲ್ಲಿ ಈ ಇಂಜೆಕ್ಷನ್ ನೀಡುತ್ತಾರೆ. ಗರ್ಭಧಾರಣೆಯ ಅಂತರವನ್ನು ಕಾಯ್ದುಕೊಳ್ಳಲು ಅಥವಾ ಹೆರಿಗೆಯನ್ನು ವಿಳಂಬಗೊಳಿಸಲು ಬಯಸುವ ಮಹಿಳೆಯರಿಗೆ ಇದು ಸೂಕ್ತವಾದ ಆಯ್ಕೆಯಾಗಿದೆ. ಸಾಮಾನ್ಯವಾಗಿ 6 ವಾರಗಳ ಪ್ರಸವಾನಂತರದಿಂದ ಪ್ರಾರಂಭವಾಗುವ ಹಾಲುಣಿಸುವ ತಾಯಂದಿರಿಗೂ ಇದು ಸೂಕ್ತವಾಗಿದೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ ಶಿವಕುಮಾರ ಅವರು ತಿಳಿಸಿದ್ದಾರೆ.

ಪ್ರಯೋಜನಗಳು: ಗರ್ಭಧಾರಣೆಯನ್ನು ತಡೆಗಟ್ಟುವುದರ ಜೊತೆಗೆ, ಇದು ಗರ್ಭನಿರೋಧಕವಲ್ಲದ ಪ್ರಯೋಜನಗಳನ್ನು ನೀಡುತ್ತದೆ. ಸ್ತನ ಕ್ಯಾನ್ಸ ನಿಯಂತ್ರಣ, ಗರ್ಭಕೋಶ ಸಮಸ್ಯೆಗಳ ಕಡಿಮೆ ಮಾಡುವಿಕೆ, ರಕ್ತಹೀನತೆ ಅಪಾಯ ಕಡಿಮೆ ಮಾಡುವುದು, ವಿಶೇಷವಾಗಿ ಮಹಿಳೆಯರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಾಗ ಉಂಟಾಗುವ ಮುಜುಗರದಿಂದ ದೂರವಾಗಲು ಇದು ಸಹಕಾರಿ ಎಂದು ತಿಳಿಸಿದರು.

ಪುನಃ ಗರ್ಭ ಧರಿಸುವಿಕೆಗೆ ಮರಳುವಿಕೆ: ಇಂಜೆಕ್ಷನ್‌ನ್ನು ನಿಲ್ಲಿಸಿದ ನಂತರ, ಪುನಃ ಗರ್ಭಧಾರಣೆಗೆ ಮರಳುವ ಸರಾಸರಿ ಸಮಯ ಸುಮಾರು 7 ರಿಂದ 10 ತಿಂಗಳುಗಳು ಇರುತ್ತದೆ. ಆದರೆ, ಇದು ಪ್ರತಿಯೊಬ್ಬ ವ್ಯಕ್ತಿಗೆ ಬದಲಾಗಬಹುದಾಗಿದೆ.

**ಪುನರಾವರ್ತಿತ ಡೋಸ್‌ಗಳು:** ಪರಿಣಾಮಕಾರಿತ್ವವನ್ನು ಕಾಪಾಡಿಕೊಳ್ಳಲು, ಮುಂದಿನ ಡೋಸ್‌ನ್ನು ಪ್ರತಿ ಮೂರು ತಿಂಗಳಿಗೊಮ್ಮೆ, ಹೊಂದಿಕೊಳ್ಳುವ ಅವಧಿಯಲ್ಲಿ (ಕೊನೆಯ ಇಂಜೆಕ್ಷನ್‌ನಿಂದ 75 ರಿಂದ 120 ದಿನಗಳು) ತೆಗೆದುಕೊಳ್ಳಬೇಕು. ಇಂಜೆಕ್ಷನ್ ಸೈಟ್ ನಿರ್ವಹಣೆಯ ನಂತರ ಮಸಾಜ್ ಮಾಡಬಾರದು ಅಥವಾ ಉಜ್ಜಬಾರದು.

ವೈಯಕ್ತಿಕ ಆರೋಗ್ಯ ಪರಿಸ್ಥಿತಿಗಳ ಆಧಾರದ ಮೇಲೆ ಅಂತರ ಸರಿಯಾದ ಗರ್ಭನಿರೋಧಕ ಆಯ್ಕೆಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಅಂತರ ಚುಚ್ಚುಮದ್ದು ಪ್ರಾರಂಭಿಸುವ ಮೊದಲು ಸ್ತ್ರೀರೋಗತಜ್ಞರು ಅಥವಾ ಆರೋಗ್ಯ ವೃತ್ತಿಪರರೊಂದಿಗೆ ಸಮಾಲೋಚಿಸಬೇಕು. ಸಾಮಾನ್ಯ ಅಡ್ಡಪರಿಣಾಮಗಳು ಮುಟ್ಟಿನ ಚಕ್ರದಲ್ಲಿನ ಬದಲಾವಣೆಗಳನ್ನು ಒಳಗೊಂಡಿರಬಹುದಾಗಿದೆ. ಉದಾಹರಣೆಗೆ ಅನಿಯಮಿತ ಮುಟ್ಟುಗಳು, ಅಮೆನೋರಿಯಾ (ಋತುಚಕ್ರದ ಅನುಪಸ್ಥಿತಿ) ಈ ಬದಲಾವಣೆಗಳು ಸಾಮಾನ್ಯ ಮತ್ತು ಕಾಲಾನಂತರದಲ್ಲಿ ಕಡಿಮೆಯಾಗುತ್ತವೆ ಎಂದು ಡಾ ಶಿವಕುಮಾರ ಅವರು ತಿಳಿಸಿದ್ದಾರೆ.

# ಡಿ. 21 ರಂದು ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಅಂಗವಾಗಿ ತರಬೇತಿ ಕಾರ್ಯಕ್ರಮ: ಡಾ. ಸುರೇಂದ್ರ ಬಾಬು

ವರ್ಷಗಳಿಂದ ದೇಶದಲ್ಲಿ ಪೋಲೀಯೊ ಕಾಯಿಲೆ ಪ್ರಕರಣಗಳು ವರದಿಯಾಗಿರುವುದಿಲ್ಲ, ಜಗತ್ತಿನಲ್ಲಿ ಇಂದು ಪೋಲಿಯೋ ರೋಗ ಸಂಪೂರ್ಣವಾಗಿ ನಿರ್ಮೂಲನೆಯ ಹಂತಕ್ಕೆ ತಲುಪಿದ್ದರು ಕೂಡ ದೇಶದಲ್ಲಿ ಪುನಃ ಪೋಲಿಯೋ ರೋಗ ಬರಬಾರದು ಎನ್ನುವ ಉದ್ದೇಶದಿಂದ ಡಿ. 21 ರಂದು ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಜಿಲ್ಲೆಯಲ್ಲಿನ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೆ ಲಸಿಕೆ ಹಾಕಿಸಲು ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಇಂದಿನಿಂದಲೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ.ನಂದಿತಾ .ಎಂ.ಎನ್. ಮಾತನಾಡಿ ತಾಲೂಕಿನ ಎಲ್ಲಾ ವಸತಿ ಪ್ರದೇಶಗಳು, ವಲಸೆ ಪ್ರದೇಶಗಳು, ಕಟ್ಟಡ ನಿರ್ಮಾಣ ಪ್ರದೇಶಗಳು, ಇಟ್ಟಿಗೆ ಬಟ್ಟಿ, ಕುರಿಗಾಯಿಗಳು ತಂಗಿರುವ ಸ್ಥಳಗಳು, ಕೊಳಚೆ ಪ್ರದೇಶಗಳು ತೋಟದ ಮನೆ, ದೊಡ್ಡಿ, ಹಟ್ಟಿ, ಕ್ಯಾಂಪ್‌ಗಳು, ನಗರಗಳಲ್ಲಿಯ ಅಪಾರ್ಟ್ಮೆಂಟ್ ಗಳು ಸೇರಿದಂತೆ ಎಲ್ಲ ಸ್ಥಳಗಳಲ್ಲಿಯ ಮಕ್ಕಳ ಸಂಖ್ಯೆಯನ್ನು ಪಟ್ಟಿ ಮಾಡಿಟ್ಟುಕೊಂಡು ಈ ಹಿಂದೆ ಎಷ್ಟೆ ಬಾರಿ ಪೋಲಿಯೋ ಹನಿ ಹಾಕಿಸಿದ್ದರೂ ಸಹ ಪಾಲಕರು ತಮ್ಮ ಮಕ್ಕಳಿಗೆ ತಪ್ಪದೆ ಎರಡು ಹನಿ ಪೋಲಿಯೋ ದ್ರಾವಣ ಲಸಿಕೆಯನ್ನು ಹಾಕಿಸಲು ತಿಳಿಸಬೇಕು ಎಂದು ತಿಳಿಸಿದರು.

ವಿಶ್ವ ಆರೋಗ್ಯ ಸಂಸ್ಥೆಯ ಕಲಬುರ್ಗಿ ವಲಯ ಸರ್ವೇಕ್ಷಣಾಧಿಕಾರಿ ಡಾ ಅನೀಲ್ ತಾಳಿಕೋಟಿಯವರು ಜಿಲ್ಲೆಯ ವಿವಿಧ ತಾಲೂಕುಗಳ ವೈದ್ಯಾಧಿಕಾರಿಗಳಿಗೆ ಹಾಗೂ ಆರೋಗ್ಯ ಸಿಬ್ಬಂದಿಗಳಿಗೆ ಪಲ್ಸ್ ಪೋಲಿಯೋ ಲಸಿಕೆ ಕುರಿತು ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ಡಿ.ಎಸ್.ಓ. ಡಾ.ಗಣೇಶ್, ಟಿ.ಎಮ್.ಓ. ಡಾ. ಚಂದ್ರಶೇಖರಯ್ಯ ಸ್ವಾಮಿ, ಡಿ.ಎಫ್.ಡ್ಲ್ಯು.ಓ. ಡಾ ಶಿವಕುಮಾರ, ಜಿಲ್ಲಾ ಆರೊಗ್ಯ ಉಪ ಶಿಕ್ಷಣಾಧಿಕಾರಿ ಬಸಯ್ಯ,ಜಿಲ್ಲೆಯ ವಿವಿಧ ತಾಲೂಕಾ ಆರೋಗ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳು, ಸಿ.ಹೆಚ್.ಸಿ, ಪಿ.ಹೆಚ್.ಸಿ.ಗಳ ಆಡಳಿತ ವೈದ್ಯಾಧಿಕಾರಿಗಳು, ಡಿವೈಹೆಚ್‌ಇಓ, ಬಿಹೆಚ್‌ಇಓ, ಆರೋಗ್ಯ ನೀರಿಕ್ಷಣಾಧಿಕಾರಿಗಳು, ಹಿರಿಯ ಪ್ರಾಥಮಿಕ ಆರೋಗ್ಯ ನೀರಿಕ್ಷಣಾಧಿಕಾರಿಗಳಿಗೆ ತರಬೇತಿ ನೀಡಲಾಯಿತು.

# ಕೇಂದ್ರ ಕಾರಾಗೃಹದಲ್ಲಿ ಮಾರಾಮಾರಿ: ದೂರು–ಪ್ರತಿದೂರು

**ಕಲಬುರಗಿ,ನ.24–** ನಗರದ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿ ಮತ್ತು ವಾರ್ಡನ್ ನಡುವೆ ಮಾರಾಮಾರಿ ನಡೆದಿದೆ. ಬಿಡುಗಡೆಯಾಗುವ ದಿನವೇ ಪಿಎಸ್‌ಐ ನೇಮಕ ಅಕ್ರಮದ ಕಿಂಗ್‌ಪಿನ್ ಆರ್.ಡಿ. ಪಾಟೀಲ್ ವಾರ್ಡನ್ ಮೇಲೆ ಹಲ್ಲೆ ಮಾಡಿದ್ದಾರೆ. ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ದೂರು, ಪ್ರತಿದೂರು ದಾಖಲಾಗಿವೆ.

ಸುಪ್ರೀಂಕೋರ್ಟ್ ಮಧ್ಯಂತರ ಜಾಮೀನು ನೀಡಿದ ಹಿನ್ನೆಲೆಯಲ್ಲಿ ಆರ್.ಡಿ. ಪಾಟೀಲ್ ಬಿಡುಗಡೆಗೆ ವಾರ್ಡನ್ ಶಿವಕುಮಾರ ನಿರಾಕರಿಸಿದ್ದರಿಂದ ಹಲ್ಲೆ ಮಾಡಿದ ಆರೋಪವಿದೆ. ಕರ್ತವ್ಯನಿರತ ವಾರ್ಡನ್ ಮೇಲೆ ಹಲ್ಲೆ ಮಾಡಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಬೆದರಿಕೆ ಹಾಕಲಾಗಿದೆ ಎಂದು ಆರ್‌ಡಿ ಪಾಟೀಲ ವಿರುದ್ಧ ವಾರ್ಡನ್ ದೂರು ನೀಡಿದರೆ, ಇತ್ತ ಆರ್.ಡಿ.ಪಾಟೀಲ್ ಸಹ ವಾರ್ಡನ್ ಶಿವಕುಮಾರ ವಿನಾಕಾರಣ ಹಲ್ಲೆ ಮಾಡಿದ್ದಾರೆ ಎಂದು ಪ್ರತಿದೂರು ನೀಡಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.ಆರ್‌ಡಿ ಪಾಟೀಲ ಮಗಳ ಮದುವೆ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ಮೂರು ವಾರದ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಆದೇಶದ ದಿನ ಬಿಡುಗಡೆ ಮಾಡುವ ವಿಚಾರದಲ್ಲಿ ಗಲಾಟೆ ನಡೆದಿದೆ.

# ಅತಿಥಿ ಉಪನ್ಯಾಸಕರಿಗೆ ಉದ್ಯೋಗ ಭದ್ರತೆ ನೀಡಿ ಇಲ್ಲವೆ ದಯಾಮರಣಕ್ಕೆ ಅವಕಾಶ ಕೊಡಿ.ಡಾ,ಹೆಚ್,ಆರ್,ಕಲ್ಮನಿ




**ಗದಗ,ನ,24:–** ಸಂಘದ ರಾಜ್ಯಾಧ್ಯಕ್ಷರಾದ ಡಾಕ್ಟರ್. ಹನುಮಂತ ಗೌಡ ಕಲ್ಮನಿಯವರು ಇಂದು ಬೆಳಿಗ್ಗೆ ಗದಗಿನ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಕಳೆದ ಮೂರೂ ದಶಕಗಳಿಂದ ಅತಿಥಿ ಉಪನ್ಯಾಸಕರು ಶಿಕ್ಷಣ ವಲಯದಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿದ್ದರೂ,ಅವರ ಸೇವೆಗೆ ಶಾಶ್ವತ ಪರಿಹಾರ ಕೊಡಲು ಯಾವುದೇ ಸರ್ಕಾರ ಗಂಭೀರ ಮನಸ್ಸು ತೋರಿಸಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಫಸ್ಟ್ ಗ್ರೇಡ್ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಅತಿಥಿ ಉಪನ್ಯಾಸಕರ ನಿಸ್ವಾರ್ಥ ಸೇವೆಯಿಂದಲೇ ಸಾಗುತ್ತಿವೆ. ಆದರೂ ಕೂಡ ಸ್ಥಿರೀಕರಣ, ವೇತನ ಸಮಾನತೆ, ವಾರ್ಷಿಕ ಭದ್ರತೆ,ಹಾಗೂ ಹಕ್ಕಿನ ಗುರುತಿನ ವಿಷಯದಲ್ಲಿ ಸರ್ಕಾರ ಇನ್ನೂ ಸ್ಪಷ್ಟ ನಿಲುವು ತೆಗೆದುಕೊಂಡಿಲ್ಲ ಎಂಬುದು ಅತಿಥಿ ಉಪನ್ಯಾಸಕರ ಆಕ್ರೋಶಕ್ಕೆ ಕಾರಣವಾಗಿದೆ.

ಈಗ ನ್ಯಾಯಾಲಯದ ಆದೇಶದ ನೆಪವೊಡ್ಡಿ ಗಊಅ ನಿಯಮಗಳ ಪ್ರಕಾರ N,E,T, k,S,E,T,PH,D, ಪಡೆದ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನ ನಡೆಸಲು ಜೇಷ್ಠತಾ ಪಟ್ಟಿ ಬಿಟ್ಟು 5,600. ಜನ ಯು,ಜಿ,ಸಿ ನಿಯಮಗಳ ಪ್ರಕಾರ ಅರ್ಹತೆ ಪಡೆಯದೆ ಸುಮಾರು ಇಪ್ಪತ್ತು ವರ್ಷಗಳಿಂದ ಸೇವೆ ಮಾಡಿದ ಅನುಭವಿ ಹಿರಿಯ ಉಪನ್ಯಾಸಕರನ್ನು ಶಕ್ತಿ ಇರುವ ತನಕ ದುಡಿಸಿಕೊಂಡು ಈಗ ಬೀದಿಗೆ ಬಿಡುತ್ತಿರುವುದು ನ್ಯಾಯವೇ? ನ್ಯಾಯ ನೀಡದಿದ್ದರೆ ಚಳಿಗಾಲದ ಅಧಿವೇಷನಕ್ಕೆ ಮುತ್ತಿಗೆ ಹಾಕಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ, ಸಂಘವು 25 ನವೆಂಬರ್ 2025ರಂದು ಗದಗ ನಗರದಲ್ಲಿ ಬೃಹತ್ ಪ್ರತಿಭಟನೆ,ಮತ್ತು ಧರಣಿ ನಡೆಸುವುದಾಗಿ ಘೋಷಿಸಿದೆ. ರಾಜ್ಯದ ಎಲ್ಲಾ ಜಿಲ್ಲೆಗಳ ಅತಿಥಿ ಉಪನ್ಯಾಸಕರು ದೊಡ್ಡ ಪ್ರಮಾಣದಲ್ಲಿ ಈ ಹೋರಾಟದಲ್ಲಿ ಭಾಗಿಯಾಗುವಂತೆ ಡಾಕ್ಟರ್, ಕಲ್ಮನಿಯವರು ಮನವಿ ಮಾಡಿದ್ದಾರೆ. ಸರ್ಕಾರ ತ್ವರಿತವಾಗಿ ಶಾಶ್ವತ ನೀತಿ ಪ್ರಕಟಿಸಿ ಅತಿಥಿ ಉಪ ನ್ಯಾಸಕರಿಗೆ ಉದ್ಯೋಗ ಭದ್ರತೆ ಮತ್ತು ಮಾನವೀಯ ವೇತನ ನೀಡಬೇಕೆಂದು ಅವರು ಆಗ್ರಹಿಸಿದ್ದಾರೆ. ಶಿಕ್ಷಕರ ಸಂಕಷ್ಟವನ್ನು ನಿರ್ಲಕ್ಷಿಸುವ ಯಾವುದೇ ಆಡಳಿತವು ಶಿಕ್ಷಣ ಕ್ಷೇತ್ರಕ್ಕೆ ಅನ್ಯಾಯ ಮಾಡುತ್ತಿರುವಂತೆಯೇ ಆಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

# ಅತಿಥಿ ಉಪನ್ಯಾಸಕರ ಹೋರಾಟಕ್ಕೆ ಗದಗದ ಜಗದ್ಗುರು ತೋಂಟದಾರ್ಯ ಮಠದ ಶ್ರೀಗಳ ಅಭಯಹಸ್ತ.

**ಗದಗ, ನ,24:–** ಕರ್ನಾಟಕ ರಸಜ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾಕ್ಟರ್ ಹನುಮಂತಗೌಡ ಕಲ್ಮನಿ ಗದಗ ನ ಶ್ರೀ,ಜಗದ್ಗುರು ತೋಂಟದಾರ್ಯ ಮಠದ ಡಾಕ್ಟರ್.ಸಿದ್ದರಾಮ ಮಹಾಸ್ವಾಮಿ ಗಳವರನ್ನು ಬೇಟಿಯಾಗಿ ಆಶೀರ್ವಾದ ಪಡೆದು ದಿ.25–11–2025 ರಂದು ನಡೆಯಲಿರುವ ಅತಿಥಿ ಉಪನ್ಯಾಸಕರ ಹೋರಾಟದ ಕುರಿತು ಚರ್ಚಿಸಿದಾಗ ಪೂಜ್ಯರು ಹೋರಾಟಕ್ಕೆ ಬೆಂಬಲ ಸೂಚಿಸಿ ಈ ಹೋರಾಟದಲ್ಲಿ ನಾವೂ ಪಾಲ್ಗೊಳ್ಳುತ್ತೇವೆ ಎನ್ನುವ ಮೂಲಕಹೋರಾಟಗಾರರಲ್ಲಿ ನೂರಾನೆ ಬಲ ತುಂಬಿದರು.



# ಕಲ್ಯಾಣ ಕರ್ನಾಟಕ ನಿವಾಸಿಗಳಿಗೆ ಶ್ರೀಮತಿ ಬಸವರಾಜೇಶ್ವರಿ ಅವರ ಕುಟುಂಬದಿಂದ ಉಚಿತ ಸಮಗ್ರ ಆರೋಗ್ಯ ಶಿಬಿರ




**ಯುವಮಾರ್ಗ ಸುದ್ದಿ**

**ಲಿಂಗಸೂರು,ನ.24–** ತಾಲೂಕಿನ ಗೆಜ್ಜಲಗಟ್ಟ ಗ್ರಾಮದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸುಲಭವಾಗಿ ಲಭ್ಯವಾಗುವ ಮತ್ತು ಕೈಗೆಟುಕುವ ಆರೋಗ್ಯ ಸೇವೆಗಳ ತೀವ್ರ ಕೊರತೆ ಇದೆ.

ವೈದ್ಯಕೀಯ ವೆಚ್ಚಗಳ ಹೆಚ್ಚಳ ಮತ್ತು ಸೂಕ್ತ ಮೂಲಸೌಕರ್ಯದ ಅಭಾವದ ಕಾರಣದಿಂದ, ಆರ್ಥಿಕವಾಗಿ ದುರ್ಬಲ ಕುಟುಂಬಗಳು ಅಗತ್ಯ ಚಿಕಿತ್ಸೆ ಪಡೆಯುವುದನ್ನು ತಪ್ಪಿಸಿಕೊಳ್ಳುವುದಾಗಿಯೂ ಅಥವಾ ಖಾಸಗಿ ಆಸ್ಪತ್ರೆಗಳ ಶೋಷಣೆಗೆ ಗುರಿಯಾಗುವುದಾಗಿಯೂ ಕಂಡುಬರುತ್ತಿದೆ.

ಈ ತುರ್ತು ಅಗತ್ಯವನ್ನು ಗುರುತಿಸಿ, ಗೆಜ್ಜಲಗಟ್ಟ ಗ್ರಾಮದ ಧನಿ ಶ್ರೀ ಮಹೇಂದ್ರ ರಾಜ ಜಹಗೀರ್ದಾರ್ ಮಾಜಿ ಕೇಂದ್ರ ಸಚಿವರು ಹಾಗೂ ಸಂಸದರಾಗಿದ್ದ ಶ್ರೀಮತಿ ಬಸವರಾಜೇಶ್ವರಿ ಅವರ ಮೊಮ್ಮಗ ಜನಸೇವೆಗೆ ಮಹತ್ವದ ಹೆಜ್ಜೆ ಇಟ್ಟಿದ್ದಾರೆ.ಭಾರೀ ಮಾನವೀಯ ಪ್ರಯತ್ನದ ಅಂಗವಾಗಿ, ಶ್ರೀ ಮಹೇಂದ್ರ ರಾಜ ಜಹಗೀರ್ದಾರ್ ಅವರು "ಸಂಪೂರ್ಣ ಉಚಿತ ಆರೋಗ್ಯ ಶಿಬಿರ"ವನ್ನು ಆಯೋಜಿಸಿ, ಗೆಜ್ಜಲಗಟ್ಟ ಗ್ರಾಮದ 35–40 ಸ್ಥಳೀಯ ನಿವಾಸಿಗಳನ್ನು ಬಳ್ಳಾರಿ BMC ಆಸ್ಪತ್ರೆಗೆ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಿದರು. ಫಲಾನುಭವಿಗಳು ರಕ್ತ ಪರೀಕ್ಷೆ, ಸ್ಕ್ಯಾನ್, ಎಕ್ಸ್–ರೇ ಸೇರಿದಂತೆ ಎಲ್ಲಾ ಅಗತ್ಯ ವೈದ್ಯಕೀಯ ತಪಾಸಣೆಗಳು ಹಾಗೂ ತಜ್ಞರ ಸಲಹೆಗಳನ್ನು ಪಡೆದರು.

ಪ್ರಯಾಣ, ಆಹಾರ, ವೈದ್ಯಕೀಯ ಸಲಹೆ, ಪರೀಕ್ಷೆಗಳು, ಸ್ಕ್ಯಾನ್ಗಳು, ಔಷಧಿಗಳು ಹಾಗೂ ಅಗತ್ಯವಿರುವ ಯಾವುದೇ ಶಸ್ತ್ರಚಿಕಿತ್ಸೆಗಳು ಸೇರಿದಂತೆ ಎಲ್ಲಾ ವೆಚ್ಚಗಳನ್ನು ಶ್ರೀಮತಿ ಬಸವರಾಜೇಶ್ವರಿ ಅವರ ಮೊಮ್ಮಕ್ಕಳು ಪೂರ್ಣವಾಗಿ ಭರಿಸುತ್ತಿದ್ದಾರೆ:* ಧನಿ ಶ್ರೀ ಮಹೇಂದ್ರ ರಾಜ ಜಹಗೀರ್ದಾರ್ * ಶ್ರೀ. ಪ್ರಭುರಾಜ ಜಹಗೀರ್ದಾರ್, ಸ್ಥಾಪಕರು – ಪ್ಯೂಪಿಲ್ ಟ್ರೀ ಶಾಲೆ,ಬಳ್ಳಾರಿ * ಡಾ. ಮೇಧಿನಿ ಅಲ್ಲುಂ, BMC ಆಸ್ಪತ್ರೆ, ಬಳ್ಳಾರಿ * ಡಾ. ಭಾರತ್ ವಿ.ಜೆ., ಃಒಅ ಆಸ್ಪತ್ರೆ, ಬಳ್ಳಾರಿ ಸಾಮಾಜಿಕ ಕಲ್ಯಾಣಕ್ಕೆ ತಮ್ಮ ಬದ್ಧತೆಯ ಭಾಗವಾಗಿ, ಗೆಜ್ಜಲಗಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಇಂತಹ ಸಮಗ್ರ ಆರೋಗ್ಯ ಶಿಬಿರಗಳನ್ನು ಮುಂದಿನ ದಿನಗಳಲ್ಲಿ ನಡೆಸುವ ಯೋಜನೆಯನ್ನು ಕುಟುಂಬವು ಪ್ರಕಟಿಸಿದ

# ತಾಲೂಕು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ರವಿಕುಮಾರ ಪಾಟೀಲ್ ಆಯ್ಕೆ



**ಯುವಮಾರ್ಗ ಸುದ್ದಿ**

**ಮಾನ್ವಿ,ನ.24–** ಪಟ್ಟಣದ ತಾಲೂಕು ವಕೀಲರ ಸಂಘಕ್ಕೆ 2026–27 ನೇ ಸಾಲಿಗಾಗಿ ನಡೆದ ಚುನಾವಣೆಯಲ್ಲಿ ವಕೀಲರ ಸಂಘದ ಅಧ್ಯಕ್ಷರಾಗಿ ರವಿಕುಮಾರ ಪಾಟೀಲ್, ಉಪಾಧ್ಯಕ್ಷರಾಗಿ ಶಿವಪ್ಪ ಸುಂಕನೂರು,ವಿಶ್ವನಾಥ ರಾಯಪ್ಪ, ಪ್ರ.ಕಾರ್ಯದರ್ಶಿಯಾಗಿ ಯಲ್ಲಪ್ಪ ಬಾದರದಿನ್ನಿ, ಜಂಟಿ ಕಾರ್ಯದರ್ಶಿಯಾಗಿ ನಾಗರಾಜ ಗೂಗಲ್, ಮಹಿಳಾ ಮೀಸಲು ಸ್ಥಾನಗಳಾದ ಖಜಾಂಚಿ ಸ್ಥಾನಕ್ಕೆ ಸ್ಟೇಲಾ ಶಾರ್ಲಾಟ್ ಜಂಟಿ ಕಾರ್ಯದರ್ಶಿಯಾಗಿ ಚಂದ್ರಕಲಾ ಅವಿರೋಧ ಆಯ್ಕೆ ಯಾಗಿದ್ದಾರೆ. ಒಟ್ಟು 234 ಸದಸ್ಯರಲ್ಲಿ 221 ಸದಸ್ಯರು ತಮ್ಮ ಮತವನ್ನು ಚಾಲಾಯಿಸಿದ್ದು ವಿಶೇಷವಾಗಿತ್ತು ಚುನಾವಣಾಧಿಕರಿಗಳಾಗಿ ಹಿರಿಯ ನ್ಯಾಯಾವಾದಿಗಳಾದ ಕೆ.ಶ್ರೀನಿವಾಸ ,ಸಹಾಯಕ ಚುನಾವಣಾಧಿಕಾರಿಗಳಾಗಿ ಅರವಿಂದ ದೇಸಾಯಿ, ಮತ್ತು ಎಂ.ಭರತ್ ಪಾಟೀಲ್ ಕಾರ್ಯನಿರ್ವಹಿಸಿದರು.

ನೂತನವಾಗಿ ವಕೀಲರ ಸಂಘಕ್ಕೆ ಆಯ್ಕೆಯಾದ ಎಲ್ಲಾ ಪದಾಧಿಕಾರಿಗಳನ್ನು ನ್ಯಾಯಾಲಯದ ಅವರಣದಲ್ಲಿ ವಕೀಲರು ಗೌರವಿಸಿ ಸಂಭ್ರಮಾಚರಣೆ ಮಾಡಿದರು.

# ಬಾಲಿವುಡ್ ಹಿರಿಯ ನಟ ಧರ್ಮೇಂದ್ರ ಇನ್ನಿಲ್ಲ..!



ಮುಂಬೈ,ನ.24– ಕಳೆದ ಹಲವು ದಿನಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಬಾಲಿವುಡ್‌ನ ಹೀ ಮ್ಯಾನ್, ಎವರ್‌ಗ್ರೀನ್ ಸ್ಟಾರ್, ಆಕ್ಷನ್ ಕಿಂಗ್ ಎಂದು ಜನಪ್ರಿಯರಾಗಿದ್ದ ಹಿರಿಯ ನಟ ಧರ್ಮೇಂದ್ರ (89) ಅವರು ಸೋಮವಾರ ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಧರ್ಮೇಂದ್ರ ಅವರು ತೀವ್ರ ಉಸಿರಾಟ ಸಮಸ್ಯೆಯಿಂದ ಬಳಲುತ್ತಿದ್ದರು. ಸೋಮವಾರ ಬೆಳಿಗ್ಗೆ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಗಿತ್ತು. , ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರನ್ನು ಉಳಿಸಿಕೊಳ್ಳುವ ವೈದ್ಯರ ಪ್ರಯತ್ನ ಫಲಕೊಡಲಿಲ್ಲ.

ರಾಷ್ಟ್ರಪತಿ ದ್ರೌಪತಿ ಮುರ್ಮು, ಉಪ ರಾಷ್ಟ್ರಪತಿ ರಾಧಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವಾರು ಗಣ್ಯರು ಸಂತಾಪ ಸೂಚಿಸಿದ್ದಾರೆ. ಇದೇ ಡಿಸೆಂಬರ್ 8ರಂದು 90ನೇ ವಸಂತಕ್ಕೆ ಕಾಲಿಡಲಿರುವ ನಟ ಧರ್ಮೇಂದ್ರ ಅವರನ್ನು ಕಳೆದ ವಾರವಷ್ಟೇ ಉಸಿರಾಟದ ತೊಂದರೆಯಿಂದಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅದಲ್ಲದೇ ಏಪ್ರಿಲ್‌ನಲ್ಲಿ ಅವರು ಕಣ್ಣಿನ ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದರು.

ಆರು ದಶಕಗಳ ವೃತ್ತಿಜೀವನದಲ್ಲಿ ಧರ್ಮೇಂದ್ರ ಅವರು ಹಿಂದಿ ಚಿತ್ರರಂಗದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಅವರ ಮನೋಹರಕ ಅಭಿನಯದಿಂದಾಗಿ ಬೇಗನೆ ಜನಪ್ರಿಯತೆಯನ್ನು ಪಡೆದರು.

1960ರಲ್ಲಿ ದಿಲ್ ಭೀ ತೇರಾ ಹಮ್ ಭೀ ತೇರೆ ಮೂಲಕ ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದರು. ಅಲ್ಲಿಂದ ಪ್ರಾರಂಭವಾಗಿ ಬಂದಿನಿ , ಅನುಪಮಾ, ಶೋಲೆ, ಚುಪ್ಕೆ ಚುಪ್ಕೆ, ಮೇರಾ ಗಾಂವ್ ಮೇರಾ ದೇಶ್ ಮತ್ತು ಡ್ರೀಮ್ ಗರ್ಲ್ ಸೇರಿದಂತೆ ಹಲವುಗಳಲ್ಲಿ ಸಿನಿಮಾಗಳಲ್ಲಿ ನಟಿಸಿದ್ದಾರೆ. 2025ರ ಆರಂಭದಲ್ಲಿ ಧರ್ಮೇಂದ್ರ ಅವರು ಶಾಹಿದ್ ಕಪೂರ್ ಮತ್ತು ಕೃತಿ ಸನೋನ್ ನಟನೆಯ ತೇರಿ ಬಾತೋ ಮೇ ಐಸಾ ಉಲ್ಜಾ ಜಿಯಾ ಸಿನಿಮಾದಲ್ಲಿ ಕೊನೆಯ ಬಾರಿ ಕಾಣಿಸಿಕೊಂ ಡಿದ್ದರು. ಇನ್ನೂ ಡಿಸೆಂಬರ್ 25ರಂದು ತೆರೆಕಾಣಲಿರುವ ಇಕ್ಕಿಸ್ ಸಿನಿಮಾದಲ್ಲಿ ಕಾಣಿಸಿಕೊಳ್ಳಬೇಕಿತ್ತು. ಬಾಲಿವುಡ್ ನ ಮೂಲ ' ಹೀ–ಮ್ಯಾನ್ ' ಖ್ಯಾತಿಯ ಧರ್ಮೇಂದ್ರ , ತಮ್ಮ ಮನಮೋಹಕ ನಟನೆ, ಆಕರ್ಷಕ ರೂಪ ಮತ್ತು ಯಶಸ್ವಿ ಚಿತ್ರಗಳ ಮೂಲಕ ಪ್ರೇಕ್ಷಕರ ಮನ ಗೆದ್ದಿದ್ದರು. ಪಂಜಾಬ್ ನ ಸಾಮಾನ್ಯ ಹಿನ್ನೆಲೆಯಿಂದ ಬಂದು, ಭಾರತೀಯ ಚಿತ್ರರಂಗದ ದಿಗ್ಗಜರಾಗಿ ಬೆಳೆದ ಧರ್ಮೇಂದ್ರ ಅವರ ಜೀವನವು ಉತ್ಸಾಹ, ಕುಟುಂಬ ಮತ್ತು ಸಿನಿಮಾದಿಂದ ತುಂಬಿತ್ತು. 1935ರಲ್ಲಿ ಜನಿಸಿದ ಧರ್ಮೇಂದ್ರ ದೇವಲ್ ಅವರು 1950ರ ದಶಕದ ಕೊನೆಯಲ್ಲಿ ತಮ್ಮ ನಟನಾ ವೃತ್ತಿಜೀವನವನ್ನು ಪ್ರಾರಂಭಿಸಿ, ಶೀಘ್ರದಲ್ಲೇ ಭಾರತೀಯ ಚಿತ್ರರಂಗದ ಅಗ್ರ ತಾರೆಯಾದರು.

ಶೋಲೆ', 'ಸತ್ಯಕಾಮ್', 'ಚುಪ್ಕೆ ಚುಪ್ಕೆ', ಮತ್ತು 'ಯಾದೋನ್ ಕಿ ಬಾರಾತ್' ನಂತಹ ಯಶಸ್ವಿ ಚಿತ್ರಗಳ ಮೂಲಕ ಅವರು ಮನೆಮಾತಾದರು. ಆದರೆ ತೆರೆಹಿಂದೆ, ಕುಟುಂಬದ ಬಾಂಧವ್ಯ, ಪ್ರೀತಿ ಮತ್ತು ಪರಂಪರೆಯಿಂದ ತುಂಬಿದ ಅವರ ನಿಜ ಜೀವನದ ಕಥೆಯೂ ಅಷ್ಟೇ ರೋಚಕವಾಗಿದೆ. ಧರ್ಮೇಂದ್ರ ಅವರು ಎರಡು ವಿವಾಹಗಳಾಗಿದ್ದವು. ಅವರ ಮೊದಲ ಪತ್ನಿ ಪ್ರಕಾಶ್ ಕೌರ್ ಅವರು ಯಾವಾಗಲೂ ಜನಸಂದಣಿಯಿಂದ ದೂರ ಉಳಿದಿದ್ದರು. ಅವರಿಗೆ ಸನ್ನಿ ದೇವಲ್, ಬಾಬಿ ದೇವಲ್, ವಿಜೇತಾ ಮತ್ತು ಅಜೀತಾ ಎಂಬ ನಾಲ್ಕು ಮಕ್ಕಳಿದ್ದಾರೆ.

ನಂತರ, ಧರ್ಮೇಂದ್ರ ಅವರು ಬಾಲಿವುಡ್ ನ 'ಡ್ರೀಮ್ ಗರ್ಲ್' ಹೇಮಾ ಮಾಲಿನಿ ಅವರನ್ನು ವಿವಾಹವಾದರು. ಅವರಿಬ್ಬರಿಗೂ ಎಶಾ ದೇವಲ್ ಮತ್ತು ಅಹಾನಾ ದೇವಲ್ ಎಂಬ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ದೇವಲ್ ಕುಟುಂಬವು ನಿಜಕ್ಕೂ ಬಾಲಿವುಡ್ ರಾಜಮನೆತನಕ್ಕೆ ಸಮಾನವಾಗಿದೆ. ಧರ್ಮೇಂದ್ರ ಅವರ ಹಿರಿಯ ಮಗ ಸನ್ನಿ ದೇವಲ್, ತಮ್ಮ ತಂದೆಯ ಹೆಜ್ಜೆಗಳನ್ನು ಅನುಸರಿಸಿ ಭಾರತದ ಅತ್ಯಂತ ಪ್ರೀತಿಯ ಆಕ್ಷನ್ ಹೀರೋಗಳಲ್ಲಿ ಒಬ್ಬರಾದರು. ತಮ್ಮ ಶಕ್ತಿಶಾಲಿ ಅಭಿನಯ ಮತ್ತು ಐಕಾನಿಕ್ ಸಂಭಾಷಣೆಗಳಿಗೆ ಹೆಸರುವಾಸಿಯಾದ ಸನ್ನಿ, 'ಘಾಯಲ್', 'ಗಾದರ್: ಏಕ್ ಪ್ರೇಮ್ ಕಥಾ', ಮತ್ತು 'ಬಾರ್ಡರ್' ನಂತಹ ಸೂಪರ್ ಹಿಟ್ ಚಿತ್ರಗಳ ಮೂಲಕ ತಮ್ಮದೇ ಆದ ಛಾಪು ಮೂಡಿಸಿದರು. ಅವರು ರಾಜಕೀಯಕ್ಕೂ ಪ್ರವೇಶಿಸಿ, ಚಿತ್ರರಂಗದಲ್ಲಿ ಗೌರವಾನ್ವಿತ ತಾರೆಯಾಗಿ ಮುಂದುವರೆದಿದ್ದಾರೆ. ಧರ್ಮೇಂದ್ರ ಅವರ ಕಿರಿಯ ಮಗ ಬಾಬಿ ದೇವಲ್, 90ರ ದಶಕದಲ್ಲಿ ತಮ್ಮ ಚಾಕೊಲೇಟ್ ಬಾಯ್ ಲುಕ್ ನಿಂದ ಪ್ರೇಕ್ಷಕರನ್ನು ಮೋಡಿ ಮಾಡಿದರು. 'ಬರ್ಸಾತ್', 'ಗುಪ್ತ್', ಮತ್ತು 'ಸೋಲ್ಜರ್' ನಂತಹ ಚಿತ್ರಗಳು ಅವರನ್ನು ಯುವಕರ ಐಕಾನ್ ಆಗಿ ರೂಪಿಸಿದವು. ಒಂದು ಸಣ್ಣ ವಿರಾಮದ ನಂತರ, ಬಾಬಿ 'ಆಶ್ರಮ್' ಮತ್ತು 'ಅನಿಮಲ್' ಚಿತ್ರಗಳ ಮೂಲಕ ಅದ್ಭುತ ಪುನರಾಗಮನಗೈದು, ತಮ್ಮ ಕುಟುಂಬದ ಪ್ರತಿಭೆ ನಿಜಕ್ಕೂ ಅನನ್ಯ ಎಂದು ಸಾಬೀತು ಪಡಿಸಿದರು.

ಧರ್ಮೇಂದ್ರ ಅವರ ಮೊದಲ ಪತ್ನಿಯ ಮಕ್ಕಳಾದ ವಿಜೇತಾ ಮತ್ತು ಅಜೀತಾ ಅವರು ಜನಸಂದಣಿಯಿಂದ ದೂರ ಉಳಿದು, ವಿದೇಶಗಳಲ್ಲಿ ತಮ್ಮ ಕುಟುಂಬಗಳೊಂದಿಗೆ ಶಾಂತಿಯುತ, ಖಾಸಗಿ ಜೀವನ ನಡೆಸುತ್ತಿದ್ದಾರೆ. ಹೇಮಾ ಮಾಲಿನಿ ಅವರೊಂದಿಗಿನ ವಿವಾಹದಿಂದ ಜನಿಸಿದ ಧರ್ಮೇಂದ್ರ ಅವರ ಇಬ್ಬರು ಸುಂದರ ಹೆಣ್ಣು ಮಕ್ಕಳೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಎಶಾ ದೇವಲ್ 2000ರ ದಶಕದ ಆರಂಭದಲ್ಲಿ ಬಾಲಿವುಡ್ ಗೆ ಪಾದಾರ್ಪಣೆ ಮಾಡಿ 'ಧೂಮ್' ಮತ್ತು 'ಯುವಾ' ನಂತಹ ಚಿತ್ರಗಳಲ್ಲಿ ನಟಿಸಿದರು. ನಂತರ ಅವರು ತಮ್ಮ ಕುಟುಂಬ ಮತ್ತು ಇತರ ಸೃಜನಾತ್ಮಕ ಕೆಲಸಗಳ ಮೇಲೆ ಗಮನಹರಿಸಲು ಚಿತ್ರರಂಗದಿಂದ ದೂರ ಸರಿದರು. ಅಹಾನಾ ದೇವಲ್, ಮತ್ತೊಂದೆಡೆ, ತೆರೆಹಿಂದೆ ಉಳಿಯಲು ಇಷ್ಟಪಡುತ್ತಾರೆ ಮತ್ತು ತಮ್ಮ ತಾಯಿಯಂತೆ ನೃತ್ಯದ ಬಗ್ಗೆ ಅಪಾರ ಒಲವು ಹೊಂದಿದ್ದರು.

ಅರ್ಜುನ್ ಹಿಂಗೋರಾಣಿಯವರ ದಿಲ್ ಭಿ ತೇರಾ ಹಮ್ ಭಿ ತೇರೆ ಚಿತ್ರದ ಮೂಲಕ ಕಲಾ ಬದುಕನ್ನು ಪ್ರಾರಂಭಿಸಿದ ಧರ್ಮೇಂದ್ರ ಅನೇಕ ಹಿಟ್ ಚಿತ್ರಗಳನ್ನು ನೀಡಿದ್ದು, ತಮ್ಮ ವೃತ್ತಿಜೀವನದಲ್ಲಿ 238 ಚಿತ್ರಗಳಲ್ಲಿ ನಟಿಸಿದ್ದಾರೆ. ಇದರಲ್ಲಿ 93 ಚಿತ್ರಗಳು ಹಿಟ್ ಆಗಿವೆ.

**ಶೋಲೆ (1975):** ಶೋಲೆ ಚಿತ್ರ ಅಂದಿನ ಒಂದು ಟೈಮ್ಲೆಸ್ ಕ್ಲಾಸಿಕ್ ಚಿತ್ರವಾಗಿದ್ದು, ಇಂದಿಗೂ ಸಹ ಸಿನಿ ಪ್ರೇಕ್ಷಕರಿಗೆ ಈ ಚಿತ್ರ ವಿಶಿಷ್ಟವಾದ ಅನುಭವವನ್ನು ನೀಡುತ್ತದೆ ಮತ್ತು ನೋಡುಗರನ್ನು ರೋಮಾಂಚನಗೊಳಿಸುತ್ತದೆ. ಈ ಚಲನಚಿತ್ರದಲ್ಲಿ ಬಾಲಿವುಡ್ ಅಂಗಳದ ಖ್ಯಾತ ನಟರುಗಳ ದೊಡ್ಡ ತಾರಾ ಬಳಗವೇ ಇತ್ತು. ನಟ ಧರ್ಮೇಂದ್ರ, ಸಂಜೀವ್ ಕುಮಾರ್, ಅಮಿತಾಭ್ ಬಚ್ಚನ್, ಅಮ್ಜದ್ ಖಾನ್, ಹೇಮಾ ಮಾಲಿನಿ, ಜಯಾ ಬಚ್ಚನ್ ಮುಂತಾದ ಅಪ್ರತಿಮ ತಾರೆಗಳನ್ನು ಶೋಲೆ ಚಿತ್ರ ಒಳಗೊಂಡಿತ್ತು. ಇವರೆಲ್ಲರ ಮಧ್ಯೆ ಧರ್ಮೇಂದ್ರ ಅವರ ಅಮೋಘವಾದ ನಟನೆ ಸಿನಿ ರಸಿಕರಿಗೆ ತುಂಬಾನೇ ಇಷ್ಟವಾಗಿತ್ತು. ಇಂದಿಗೂ ಅವರ ಅಭಿನಯ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿದಿದೆ.

# ನಾನು ಯಾರ ಸಂಧಾನಕಾರನೂ ಇಲ್ಲ




**ಯಾದಗಿರಿ, ನ. 24–** ಎಐಸಿಸಿ ನನಗೆ ಸಂಧಾನಕಾರ ಜವಾಬ್ದಾರಿ ಕೊಟ್ಟಿಲ್ಲ. ನಾನು ಯಾರ ಪ್ರತಿನಿಧಿಯಾಗಿಯೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿಲ್ಲ. ಅವರು ನನ್ನ ಸಹೋದ್ಯೋಗಿ ಹಾಗಾಗಿ ಭೇಟಿ ಮಾಡಿದ್ದೇನೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟಪಡಿಸಿದರು.

ಅಧಿಕಾರ ಹಂಚಿಕೆಯ ಬಿಕ್ಕಟ್ಟಿನಲ್ಲಿ ಎಐಸಿಸಿ ಸಂಧಾನಕಾರನ ಜವಾಬ್ದಾರಿ ನೀಡಿದೆಯೇ ಎಂಬ ಪ್ರಶ್ನೆಗೆ ಯಾದಗಿರಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಎಐಸಿಸಿ ನನಗೆ ಯಾವುದೇ ಜವಾಬ್ದಾರಿ ಕೊಟ್ಟಿಲ್ಲ. ಡಿ.ಕೆ. ಶಿಕುಮಾರ್ ಉಪಮುಖ್ಯಮಂತ್ರಿ ಇದ್ದಾರೆ. ನಮ್ಮ ಸಹೋದ್ಯೋಗಿ ಹಾಗಾಗಿ ಅವರ ಜತೆ ಮಾತನಾಡಿದ್ದೇನೆ. ಅದು ಜಿಬಿಎ ಚುನಾವಣೆಗೆ ವಿಚಾರವಾಗಿ ಅಷ್ಟೇ ಮಾತನಾಡಿರುವುದು ಬೇರೆ ಯಾವ ವಿಚಾರವನ್ನು ಚರ್ಚಿಸಿಲ್ಲ ಎಂದರು.

ನಾನು ಸಿಎಂ ಪ್ರತಿನಿಧಿಯಾಗಿಯೂ ಇಲ್ಲ, ಡಿಸಿಎಂ ಪ್ರತಿನಿಧಿಯಾಗಿಯೂ ಇಲ್ಲ. ಡಿಕೆಶಿ ಅವರಿಗೆ ತಾಳ್ಮೆಯಿಂದ ಇರು ಎಂದು ಹೇಳಲು ನಾನ್ಯಾರು. ನನಗೆ ಆ ಹಕ್ಕು ಕೊಟ್ಟಿದ್ದೀರಾ, ಅದನ್ನು ನಾನು ಹೇಗೆ ಹೇಳಲಿ. ಕಾಂಗ್ರೆಸ್‌ನಲ್ಲಿ ಬಂಡಾಯವೇ ಇಲ್ಲ, ಶಮನ ಎಲ್ಲಿಂದ. ಕಾಂಗ್ರೆಸ್ ಎಲ್ಲ ಶಾಸಕರದ್ದು ಒಂದೇ ಕುಟುಂಬ. ಯಾವುದೇ ಬಣ ಇಲ್ಲ ಎಂದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಮ್ಮ ಮನೆಗೆ ಬಂದು ಮಾತನಾಡುವುದರಲ್ಲಿ ವಿಶೇಷ ಏನಿದೆ. ಅವರು ನನಗೆ 40 ವರ್ಷಗಳಿಂದ ಸ್ನೇಹಿತರು. ನಾನು ಅವರ ಸಹೋದ್ಯೋಗಿ ಇದ್ದೇನೆ. ಹಾಗಾಗಿ ಅವರು ನಮ್ಮ ಮನೆಗೆ ಬಂದಿದ್ದಾರೆ ಅಷ್ಟೇ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅವರನ್ನು ನಾನು ಭೇಟಿ ಮಾಡಿರುವುದರಲ್ಲಿ ತಪ್ಪೇನು. ಅವರು ನಮ್ಮ ರಾಷ್ಟ್ರೀಯ ಅಧ್ಯಕ್ಷರು. ಆಗಾಗ ಭೇಟಿ ಮಾಡುತ್ತೇನೆ. ಅದರಂತೆ ನಿನ್ನೆಯೂ ಭೇಟಿ ಮಾಡಿದ್ದೇನೆ ಎಂದರು.

## ಕೇಂದ್ರ ಕಾರಾಗೃಹದಲ್ಲಿ ಮಾರಾಮಾರಿ: ದೂರು–ಪ್ರತಿದೂರು




**ಕಲಬುರಗಿ,ನ.24–** ನಗರದ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿ ಮತ್ತು ವಾರ್ಡನ್ ನಡುವೆ ಮಾರಾಮಾರಿ ನಡೆದಿದೆ. ಬಿಡುಗಡೆಯಾಗುವ ದಿನವೇ ಪಿಎಸ್‌ಐ ನೇಮಕ ಅಕ್ರಮದ ಕಿಂಗ್‌ಪಿನ್ ಆರ್.ಡಿ. ಪಾಟೀಲ್ ವಾರ್ಡನ್ ಮೇಲೆ ಹಲ್ಲೆ ಮಾಡಿದ್ದಾರೆ. ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ದೂರು, ಪ್ರತಿದೂರು ದಾಖಲಾಗಿವೆ.

ಸುಪ್ರೀಂಕೋರ್ಟ್ ಮಧ್ಯಂತರ ಜಾಮೀನು ನೀಡಿದ ಹಿನ್ನೆಲೆಯಲ್ಲಿ ಆರ್.ಡಿ. ಪಾಟೀಲ್ ಬಿಡುಗಡೆಗೆ ವಾರ್ಡನ್ ಶಿವಕುಮಾರ ನಿರಾಕರಿಸಿದ್ದರಿಂದ ಹಲ್ಲೆ ಮಾಡಿದ ಆರೋಪವಿದೆ. ಕರ್ತವ್ಯನಿರತ ವಾರ್ಡನ್ ಮೇಲೆ ಹಲ್ಲೆ ಮಾಡಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಬೆದರಿಕೆ ಹಾಕಲಾಗಿದೆ ಎಂದು ಆರ್‌ಡಿ ಪಾಟೀಲ ವಿರುದ್ಧ ವಾರ್ಡನ್ ದೂರು ನೀಡಿದರೆ, ಇತ್ತ ಆರ್.ಡಿ.ಪಾಟೀಲ್ ಸಹ ವಾರ್ಡನ್ ಶಿವಕುಮಾರ ವಿನಾಕಾರಣ ಹಲ್ಲೆ ಮಾಡಿದ್ದಾರೆ ಎಂದು ಪ್ರತಿದೂರು ನೀಡಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಆರ್‌ಡಿ ಪಾಟೀಲ ಮಗಳ ಮದುವೆ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಮೂರು ವಾರದ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಆದೇಶದ ದಿನ ಬಿಡುಗಡೆ ಮಾಡುವ ವಿಚಾರದಲ್ಲಿ ಗಲಾಟೆ ನಡೆದಿದೆ.

# ಮನೆ ಬೀಗ ಮುರಿದು 20.62 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು

**ಕಲಬುರಗಿ,ನ.24–**ಮನೆ ಬೀಗ ಮುರಿದು 20.60 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿರುವ ಘಟನೆ ನಗರದ ಗಾಬರೆ ಲೇಔಟ್‌ನಲ್ಲಿ ನಡೆದಿದೆ.

ನಿವೃತ್ತ ವಲಯ ಅರಣ್ಯಾಧಿಕಾರಿ ಈರಣ್ಣ ಪಟ್ಟೇದಾರ ಅವರ ಮನೆಯ ದ್ವಾರ ಬಾಗಿಲ ಬೀಗ ಕತ್ತರಿಸಿ ಕಳ್ಳರು 2.50 ಲಕ್ಷ ರೂ.ಮೌಲ್ಯದ 50 ಗ್ರಾಂ.ಬಂಗಾರದ ಎರಡು ಎಳೆಯುಳ್ಳ ತಾಳಿ, 50 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ತಾಳಿ, 3.50 ಲಕ್ಷ ರೂ.ಮೌಲ್ಯದ ಬಂಗಾರದ ಎರಡು ನಾನ್, 2.50 ಲಕ್ಷ ರೂ.ಮೌಲ್ಯದ 50 ಗ್ರಾಂ.ಬಂಗಾರದ ಲಕ್ಷ್ಮೀಹಾರ, 4 ಲಕ್ಷ ರೂ.ಮೌಲ್ಯದ 80 ಗ್ರಾಂ.ಬಂಗಾರದ ಬಿಲ್ವಾರ್, 1.50 ಲಕ್ಷ ರೂ.ಮೌಲ್ಯದ ಬಂಗಾರದ ತೋಡೆ, 2 ಲಕ್ಷ ರೂ.ಮೌಲ್ಯದ 40 ಗ್ರಾಂ.ಬಂಗಾರದ ಎರಡು ಲಾಕೆಟ್, 1 ಲಕ್ಷ ರೂ.ಮೌಲ್ಯದ ಬಂಗಾರದ ಎರಡು ಸುತ್ತುಂಗುರ, 1 ಲಕ್ಷ ರೂ.ಮೌಲ್ಯದ 20 ಗ್ರಾಂ.ಬಂಗಾರದ ನೆಕ್ಲೆಸ್, 30 ಸಾವಿರ ರೂ.ಮೌಲ್ಯದ 60 ಗ್ರಾಂ.ಬಂಗಾರದ ನೆಕ್ಲೆಸ್, 20 ಸಾವಿರ ರೂ.ಮೌಲ್ಯದ 4 ಗ್ರಾಂ.ಬಂಗಾರದ ಝುಮಕಿ, 35 ಸಾವಿರ ರೂ.ಮೌಲ್ಯದ 7 ಗ್ರಾಂ.ಬಂಗಾರದ 4 ಜೊತೆ ಬೆಂಡೋಲೆಗಳು, 12 ಸಾವಿರ ರೂ.ಮೌಲ್ಯದ 120 ಗ್ರಾಂ. ಬೆಳ್ಳಿಯ ಆರತಿ ಪಂಚಪಳಾ, 10 ಸಾವಿರ ರೂ.ಮೌಲ್ಯದ 100 ಗ್ರಾಂ.ಬೆಳ್ಳಿ ಸಮೆ, 60 ಸಾವಿರ ರೂ.ನಗದು ಸೇರಿ 20.60 ಲಕ್ಷ ರೂ.ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಿದ್ದಾರೆ.

ಈರಣ್ಣಾ ಪಟ್ಟೇದಾರ ಅವರು ಮನೆಗೆ ಬೀಗ ಹಾಕಿಕೊಂಡು ಬಾಗಲಕೋಟೆಯಲ್ಲಿರುವ ಮಗಳ ಮನೆಗೆ ಹೋದ ವೇಳೆ ಮನೆ ಕಳ್ಳತನವಾಗಿದೆ ಎಂದು ತಿಳಿದುಬಂದಿದೆ. ಈ ಸಂಬಂಧ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಪಾರಂಪರಿಕ ಸ್ಥಳಗಳಿಂದ ಇತಿಹಾಸ, ಸಂಸ್ಕೃತಿ ಉಳಿಯಲು ಸಾಧ್ಯ

**ಕಲಬುರಗಿ: ನ.24–**ನಮ್ಮ ಜಿಲ್ಲೆ ಸೇರಿದಂತೆ ದೇಶದಲ್ಲಿ ಅನೇಕ ಸುಕ್ಷೇತ್ರಗಳು, ಸ್ಮಾರಕಗಳು, ನೈಸರ್ಗಿಕ ತಾಣಗಳು, ಐತಿಹಾಸಿಕ ಮತ್ತು ಆಧ್ಯಾತ್ಮಿಕ ಸ್ಥಳಗಳಿದ್ದು ಅವುಗಳನ್ನು ಉಳಿಸಿ, ಸಂರಕ್ಷಿಸಿ, ಅಭಿವೃದ್ಧಿಗೊಳಿಸುವುದು ಅವಶ್ಯಕವಾಗಿದೆ. ಇದರಿಂದ ನಮ್ಮ ದೇಶದ ಸಂಸ್ಕೃತಿ, ಇತಿಹಾಸ, ಪರಂಪರೆಯನ್ನು ಮುಂದಿನ ಪೀಳಿಗೆಗೆ ದೊರೆಯಲು ಸಾಧ್ಯವಾಗುತ್ತದೆ ಎಂದು ಸಂಶೋಧಕ–ಸಾಹಿತಿ ಮುಡಬಿ ಗುಂಡೇರಾವ ಅಭಿಮತಟಪಟ್ಟರು.



ನಗರದ ಬಹುಮನಿ ಕೋಟೆಯ ಆವರಣದಲ್ಲಿನ ಐತಿಹಾಸಿಕ ಜಾಮಿಯಾ ಮಸೀದಿಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಭಾನುವಾರ ಏರ್ಪಡಿಸಿದ್ದ 'ವಿಶ್ವ ಪರಂಪರೆ ದಿನಾಚರಣೆ'ಯಲ್ಲಿ ಅವರು ಮಾತನಾಡುತ್ತಿದ್ದರು.

ಜಾಮಿಯಾ ಮಸೀದಿಯು ಏಷ್ಯಾ ಖಂಡದಲ್ಲಿನ ದೊಡ್ಡ ಮಸೀದಿಗಳಲ್ಲಿ ಒಂದಾಗಿದೆ. ಇದು ಇಂಡೋ–ಸಾರ್ಸನಿಕ(ಪರ್ಷಿಯನ್) ವಾಸ್ತುಶಿಲ್ಪ ಶೈಲಿಯಲ್ಲಿದೆ. ಬಹುಮನಿಯರ ಕಾಲದ ರಾಜಧಾನಿಯಾಗಿತ್ತು. ಅಪರೂಪದ ವಾಸ್ತುಶಿಲ್ಪ, ದೊಡ್ಡದಾದ ತೋಪು ಹೊಂದಿದೆ. ಬಹುಮನಿಯರು ಇನ್ನೂರು ಹೆಚ್ಚು ವರ್ಷ ಕಾಲ ಈ ಭಾಗದಲ್ಲಿ ಕಲೆ, ಸಾಹಿತ್ಯ, ಪರಂಪರೆಯನ್ನು ಸಂರಕ್ಷಿಸಿದರು. ಅವರ ಅವಧಿಯಲ್ಲಿಯೇ ಸೂಫಿ ಸಂತ ಖಾಜಾ ಬಂದಾನವಾರು ತಮ್ಮ ಸಂದೇಶದ ಮೂಲಕ ಸಮಾಜಮುಖಿ ಕಾರ್ಯವನ್ನು ಮಾಡುವ ಮೂಲಕ ಕಲಬುರಗಿಯನ್ನು ಭಾವೈಕ್ಯತೆಯ ನೆಲವನ್ನಾಗಿಸಿದ್ದಾರೆ. ಶಹಾಬಜಾರ, ಶೇಖರೋಜಾ, ತಾಜ್ ಸುಲ್ತಾನಪುರ, ಹೀರಾಪುರ, ಹೊಳಕುಂದಾ, ಸೋರ್ ಗುಂಬಜ್ ಮುಂತಾದ ಸ್ಥಳನಾಮಗಳು ಮತ್ತು ಸ್ಮಾರಕಗಳು ಬಹುಮನಿಯರ ಕಾಲದ ಇತಿಹಾಸವನ್ನು ಸಾರುತ್ತದೆ ಎಂದರು.

ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕ ಎಚ್.ಬಿ.ಪಾಟೀಲ್ ಮಾತನಾಡಿ, ಐತಿಹಾಸಿಕ ಸ್ಥಳಗಳ ಬಗ್ಗೆ ಹೆಚ್ಚಿನ ಸಂಶೋಧನೆ ಜರುಗಬೇಕು. ಭವ್ಯವಾದ ಅನೇಕ ತಾಣಗಳು, ಸ್ಮಾರಕಗಳು, ಸುಕೇತ್ರಗಳು ಇಂದು ಅವನತಿಯ ಅಂಚಿನಲ್ಲಿವೆ. ಇವುಗಳು ನಾಶವಾದರೆ ಮುಂದಿನ ಪೀಳಿಗೆ ಕೇವಲ ಚಿತ್ರದಲ್ಲಿ ನೋಡಲು ಮಾತ್ರ ಸಾಧ್ಯವಿದ್ದು, ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರಾಜಶೇಖರ ಪೂಜಾರಿ, ಬಬ್ಲು ರಾಠೋಡ, ಅಲ್ತಾಫ್, ರವಿಕಾಂತ ಮುಲಗೆ, ಪ್ರಜ್ವಲ ಪಾಟೀಲ್, ಇಮ್ರಾನ್, ಅಸವದ್, ಜಪರಖಾನ್, ಪ್ರೇಮ, ಮಕದುಮ್ ಪಟೇಲ್ ಸೇರಿದಂತೆ ಮುಂತಾದವರು ಇದ್ದರು.

# ರಾಜ್ಯಗಳ ಸಾಧನೆಗಳನ್ನು ತನ್ನದೆಂದು ಬಿಂಬಿಸುತ್ತಿದೆ ಕೇಂದ್ರ ಸರ್ಕಾರ : ಪ್ರಿಯಾಂಕ ಖರ್ಗೆ ಆರೋಪ



**ಬೆಂಗಳೂರು, ನ.24–** ರಾಜ್ಯ ಸರ್ಕಾರಗಳ ಸಾಧನೆಯ ನೆರಳಲ್ಲಿ ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರ ಬೆನ್ನು ತಟ್ಟಿಕೊಳ್ಳುವುದು ಹೊಸ ವಿಷಯವೇನಲ್ಲ. ಜಲಜೀವನ್ ಮಿಷನ್ ಹೆಸರಿಗೆ ಮಾತ್ರ ಕೇಂದ್ರ ಪುರಸ್ಕೃತ ಯೋಜನೆಯಾದರೂ, ವಾಸ್ತವದಲ್ಲಿ ಕರ್ನಾಟಕದ ಮಟ್ಟಿಗೆ ಕೇಂದ್ರ ತಿರಸ್ಕಾರ ಯೋಜನೆಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಆರೋಪಿಸಿದ್ದಾರೆ.

ತಮ ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಮಾಹಿತಿ ನೀಡಿರುವ ಅವರು, ಪ್ರಸಕ್ತ ಸಾಲಿನವರೆಗೆ ಜೆಜೆಎಂ ಯೋಜನೆಗಾಗಿ ಒಟ್ಟು 35,698.58 ಕೋಟಿ ರೂ. ಖರ್ಚು ಮಾಡಲಾಗಿದೆ. ಇದರಲ್ಲಿ ರಾಜ್ಯ ಸರ್ಕಾರ ಖರ್ಚು ಮಾಡಿರುವುದು 24,598.45 ಕೋಟಿ ರೂ. ಇದುವರೆಗೂ ಕೇಂದ್ರ ಸರ್ಕಾರ ಕೊಟ್ಟಿರುವುದು 11,786. 63 ಕೋಟಿ ರೂ.ಮಾತ್ರ ಎಂದು ವಿವರಿಸಿದ್ದಾರೆ.ಪ್ರಸಕ್ತ ಸಾಲಿನವರೆಗೆ ಕೇಂದ್ರ ಸರ್ಕಾರ ಬಿಡುಗಡೆಗೊಳಿಸಬೇಕಾದ ಮೊತ್ತ 13,004.63 ಕೋಟಿ ರೂ. ಕರ್ನಾಟಕದೆಡೆಗಿನ ಬಿಜೆಪಿಯ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಹೇಗಿದೆ ಎಂದು ನೋಡುವುದಾದರೆ, 2024–25ನೇ ಆರ್ಥಿಕ ಸಾಲಿನಲ್ಲಿ ಜೆಜೆಎಂ ಯೋಜನೆಗಾಗಿ 3,804.41 ಕೋಟಿಯನ್ನು ಕರ್ನಾಟಕಕ್ಕೆ ಹಂಚಿಕೆ ಮಾಡಿತ್ತು. ಆದರೆ ಬಿಡುಗಡೆಯಾದ ಮೊತ್ತ ಕೇವಲ 570.66 ಕೋಟಿ ರೂ. ಮಾತ್ರ ಎಂದು ಹೇಳಿದರು.ಯೋಜನೆಯ ಜಾರಿಗಾಗಿ ರಾಜ್ಯ ಸರ್ಕಾರವೇ ಆಸಕ್ತಿವಹಿಸಿ ಹಣ ಖರ್ಚು ಮಾಡಿದೆ. ಆದರೆ ಕೇಂದ್ರ ಸರ್ಕಾರದ ಅನ್ಯಾಯ ಮಾತ್ರ ಮುಂದುವರೆಯುತ್ತಲೇ ಇದೆ. ಈ ಹಿಂದೆಯೂ ಜೆಜೆಎಂ ಯೋಜನೆಯ ಬಾಕಿ ಮೊತ್ತವನ್ನು ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು. ಈಗಲೂ ಮತ್ತೊಮ್ಮೆ ಒತ್ತಾಯಿಸಿದ್ದಾರೆ ಎಂದು ವಿವರಿಸಿದರು.

ಕೇಂದ್ರ ಸರ್ಕಾರದ ಇಂತಹ ಅನ್ಯಾಯಗಳಿಂದ, ನಿರ್ಲಕ್ಷ್ಯದಿಂದ, ಕರ್ನಾಟಕದೆಡೆಗಿನ ದ್ವೇಷದಿಂದ ರಾಜ್ಯದ ಆರ್ಥಿಕ ಪ್ರಗತಿಗೆ ಪೆಟ್ಟು ಬೀಳುತ್ತಿದ್ದರೂ, ರಾಜ್ಯದ ಯಾವೊಬ್ಬ ಬಿಜೆಪಿ ನಾಯಕರು ಕರ್ನಾಟಕದ ಪರವಾಗಿ ಧ್ವನಿ ಎತ್ತುವ, ನ್ಯಾಯ ದೊರಕಿಸಿಕೊಡುವ ಪ್ರಯತ್ನ ಮಾಡದಿರುವುದು ಬಿಜೆಪಿಯ ರಾಜಕೀಯ ಮತ್ತು ನೈತಿಕ ದಿವಾಳಿತನಕ್ಕೆ ಸಾಕ್ಷಿ. ನಿಜಕ್ಕೂ ರಾಜ್ಯದ ಪರವಾಗಿ ಕಾಳಜಿ ಇದ್ದರೆ, ಸರ್ಕಾರದ ಒತ್ತಾಯಕ್ಕೆ ದನಿಗೂಡಿಸಿ ತಮ ಬದ್ಧತೆಯನ್ನು ನಿರೂಪಿಸಲಿ ಎಂದರು.

ಯುವ ಮಾರ್ಗ

ಮಂಗಳವಾರ: 25-11-2025

## ಸಾರಿಗೆ ಇಲಾಖೆಯಿಂದ ಬಾಕಿ ದಂಡಕ್ಕೆ ವಿಶೇಷ ರಿಯಾಯಿತಿ

**ರಾಯಚೂರು,ನ.24-**ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯು 1991-92ರಿಂದ 2019-20ರ ಅವಧಿಯಲ್ಲಿ ಮೋಟಾರು ಕಾಯ್ದೆ ನಿಯಮಗಳ ಉಲ್ಲಂಘನೆ ಸಂಬಂಧ ದಾಖಲಾಗಿ ಬಾಕಿ ಉಳಿದಿರುವ ಡಿಎಸ್ಎ (ಇಲಾಖಾ ಶಾಸನ) ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಲು ಸರ್ಕಾರ ವಿಶೇಷ ಅವಕಾ ಕಲ್ಪಿಸಿದ್ದು, ಈ ಹಿನ್ನೆಲೆಯಲ್ಲಿ 2025ರ ನವೆಂಬರ್ 21ರಿಂದ ಡಿಸೆಂಬರ್ 12ರವರೆಗೆ ವಾಹನ ಮಾಲೀಕರು ಬಾಕಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ನೀಡಲಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನವೆಂಬರ್ 26ರಂದು ವಿದ್ಯುತ್ ವ್ಯತ್ಯಯ

**ರಾಯಚೂರು,ನ.24-** ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆಯ ಗ್ರಾಮೀಣ ಉಪ-ವಿಭಾಗದ ವ್ಯಾಪ್ತಿಗೆ ಬರುವ 110/11 ಕೆವಿ ಮಟಮಾರಿ ವಿದ್ಯುತ್ ಉಪ-ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ನವೆಂಬರ್ 26ರ ಬೆಳಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾರ್ವಜನಿಕರ ಕುಂದುಕೊರತೆ ಸಭೆ

**ರಾಯಚೂರು,ನ.24-**ಜಿಲ್ಲಾ ಲೋಕಾಯುಕ್ತ ಪೊಲೀಸ್ ಇಲಾಖೆಯಿಂದ ನವೆಂಬರ್ 28ರ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಗೆವರೆಗೆ ರಾಯಚೂರಿನ ಮಾನವಿ ತಾಲೂಕಿನ ತಹಸೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಸಾರ್ವಜನಿಕರ ಕುಂದುಕೊರತೆ ಹಾಗೂ ಅಹವಾಲುಗಳ ಸಭೆ ಆಯೋಜಿಸಲಾಗಿದ್ದು, ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರ ಕಚೇರಿಯ ಪ್ರಕಟಣೆ ತಿಳಿಸಿದೆ.

## ಲಿಂಗಸುಗೂರು ಕ್ರಿಟಿಕಲ್ ಕೇರ್ ಘಟಕದಲ್ಲಿನ ವಿವಿಧ ಹುದ್ದೆಗಳ ಭರ್ತಿಗೆ ನೇರ ಸಂದರ್ಶನ

**ರಾಯಚೂರು,ನ.24-**ಜಿಲ್ಲೆಯ ಲಿಂಗಸುಗೂರು ತಾಲೂಕಿನ ಆಸ್ಪತ್ರೆಯಲ್ಲಿ 50 ಹಾಸಿಗೆಗಳ ಸಾಮರ್ಥ್ಯದ ಕ್ರಿಟಿಕಲ್ ಕೇರ್ ಘಟಕವನ್ನು ಕಾರ್ಯಗತಗೊಳಿಸಲು ಅವಶ್ಯವಿರುವ ವಿವಿಧ ವೃಂದದ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಅರ್ಹತೆ ಹಾಗೂ ರೋಸ್ಟರ್ ಆಧಾರದ ಮೇಲೆ ಭರ್ತಿ ಮಾಡಲು ನೇರ ಸಂದರ್ಶನಕ್ಕೆ ಅರ್ಜಿಗಳನ್ನು ಅರ್ಹ ಅಭ್ಯರ್ಥಿಗಳಿಂದ ಆಹ್ವಾನಿಸಲಾಗಿದೆ.

45 ವಯೋಮಿತಿ ಒಳಗಿರುವ ಆಸಕ್ತ ಅಭ್ಯರ್ಥಿಗಳು, ಫಿಸಿಷಿಯನ್ ತಜ್ಞರು 01 ಹುದ್ದೆಗೆ ಎಂ.ಡಿ ಅಥವಾ ಡಿ.ಎನ್.ಬಿ ಜನರಲ್ ಮೆಡಿಸಿನ್ ಎಂ.ಬಿ.ಬಿ.ಎಸ್ ವಿದ್ಯಾಹರ್ತೆ ಹೊಂದಿರುವ ಅಭ್ಯರ್ಥಿಗಳಿಗೆ ಮಾಸಿಕ ಸಂಚಿತ ವೇತನವಾಗಿ 1,40,000 ರೂ.ಗಳು ನೀಡಲಾಗುತ್ತದೆ.

ಅರಿವಳಿಕೆ ತಜ್ಞ 01 ಹುದ್ದೆಗೆ ಅನಸ್ಥೇಸಿಯಾ ಎಂ.ಬಿ.ಬಿ.ಎಸ್, ಎಂ.ಡಿ ಅನಸ್ಥೇಸಿಯಾ ವಿದ್ಯಾಹರ್ತೆ ಹೊಂದಿರುವ ಅಭ್ಯರ್ಥಿಗಳಿಗೆ ಮಾಸಿಕ ಸಂಚಿತ ವೇತನವಾಗಿ 1,40,000 ರೂ.ಗಳುನೀಡಲಾಗುವುದು.

ಆರ್ಥೋಪೆಡಿಷಿಯನ್ 01 ಹುದ್ದೆಗೆ ಎಂ.ಎಸ್ ಆರ್ಥೋ, ಡಿ.ಎನ್.ಬಿ ಆರ್ಥೋಪಿಡಿಕ್ಸ್, ಎಂ.ಬಿ.ಬಿ.ಎಸ್ ವಿದ್ಯಾಹರ್ತೆ ಹೊಂದಿರುವ ಅಭ್ಯರ್ಥಿಗಳಿಗೆ ಮಾಸಿಕ ಸಂಚಿತ ವೇತನವಾಗಿ 1,40,000 ರೂ.ಗಳು ನೀಡಲಾಗುತ್ತದೆ.

ರೇಡಿಯಾಲಜಿ 01 ಹುದ್ದೆಗೆ ರೇಡಿಯಾಲಜಿಯಲ್ಲಿ ಎಂ.ಡಿ ವಿದ್ಯಾಹರ್ತೆ ಹೊಂದಿರುವ ಅಭ್ಯರ್ಥಿಗಳಿಗೆ ಮಾಸಿಕ ಸಂಚಿತ ವೇತನವಾಗಿ 1,30,000 ರೂ.ಗಳು ಹಾಗೂ ಸ್ಟಾಫ್ ನರ್ಸ್ ಒಟ್ಟು 15 ಹುದ್ದೆಗೆ ಎನ್.ಎಚ್.ಎಂ ಮಾರ್ಗಸೂಚಿ ಪ್ರಕಾರ ವೇತನ ನೀಡಲಾಗುವುದು.

ಈ ಒಟ್ಟಾರೆ ಹುದ್ದೆಗಳಿಗೆ ನೇರ ಸಂದರ್ಶನ ಮೂಲಕ ಭರ್ತಿ ಮಾಡಲು ನವೆಂಬರ್ 27ರ ಬೆಳಗ್ಗೆ 10.30ಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಸಭಾಂಗಣ ರಾಯಚೂರು ಇಲ್ಲಿ ನೇರ ಸಂದರ್ಶನ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ಗೃಹಲಕ್ಷ್ಮೀ ಯೋಜನೆಯ ಹಣ ಬಿಡುಗಡೆ ಪ್ರಕ್ರಿಯೆ ಆರಂಭ

**ರಾಯಚೂರು,ನ.24-** ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯ 2025-26ನೇ ಸಾಲಿನ ಐದನೇ ಕಂತಿನ ಅನುದಾನದಲ್ಲಿ ಒಟ್ಟು ರೂ. 89,74,82,000, ಗಳ ಮೊತ್ತವನ್ನು ರಾಯಚೂರು ಜಿಲ್ಲೆಯ 4,48,741 ಫಲಾನುಭವಿಗಳಿಗೆ ಬಿಡುಗಡೆ ಮಾಡುವ ಪ್ರಕ್ರಿಯೆಯು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ ಚಾಲ್ತಿ ಮಾಡಲಾಗಿದೆ.

ಮುಂದಿನ ಎರಡು ಮೂರು ದಿನಗಳೊಳಗೆ ಈ ಅನುದಾನ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಆಗಲಿದೆ ಎಂದು ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಮಾನ್ಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯರಗೇರಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಸಾಧನೆ



**ರಾಯಚೂರು,ನ.24-**ಇಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಡೆದ 17 ವರ್ಷದೊಳಗಿನ ಬಾಲಕೀಯರ ಜಿಲ್ಲಾ ಮಟ್ಟದ ಹ್ಯಾಮರ್ ಥ್ರೋನಲ್ಲಿ ನಗರದ ಯರಗೇರಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಕುಮಾರಿ ಕವಿತಾ ತಂದೆ ತಾಯಪ್ಪ ಅವರು ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿನಿಯ ಸಾಧನೆಗೆ ಶಾಲೆಯ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರು ಮೆಚ್ಚುಗೆ ವ್ಯಕ್ತಪಡಿಸಿ ಶುಭ ಕೋರಿದ್ದಾರೆ ಎಂದು ಪ್ರಾಂಶುಪಾಲರಾದ ಕೊಟ್ರೇಶ್.ಜೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇಥೋಡಿಸ್ಟ್ ಚರ್ಚ್ ನಿರ್ಮಾಣ ಕಾಮಗಾರಿಗೆ ಶಾಸಕರಿಂದ ಭೂಮಿಪೂಜೆ




**ರಾಯಚೂರು,ನ.24-** ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ಶಾಸಕರಾದ ಬಸನಗೌಡ ದದ್ದಲ್ ಅವರು ನವೆಂಬರ್ 24ರಂದು ರಾಯಚೂರು ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ಇಡಪನೂರು ಗ್ರಾಮಕ್ಕೆ ಭೇಟಿ ನೀಡಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೇಥೋಡಿಸ್ಟ್ ಚರ್ಚ್ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ನೆರವೇರಿಸಿದರು. ಈ ಸಂಧರ್ಭದಲ್ಲಿ ಊರಿನ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಮುಖಂಡರು, ಅಧಿಕಾರಿಗಳು, ಕಾರ್ಯಕರ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು

## ಇಂದು ಐತಿಹಾಸಿಕ ಮಸ್ಕಿ ಮಲ್ಲಿಕಾರ್ಜುನ ದೇವರ ಕಾರ್ತೀಕೋತ್ಸವ

ಯುವಮಾರ್ಗ ಸುದ್ದಿ

**ಮಸ್ಕಿ,ನ.24-**ಪಟ್ಟಣದ ಐತಿಹಾಸಿಕ ಶ್ರೀ ಮಲ್ಲಿಕಾರ್ಜುನ ದೇವರಿಗೆ ಮಂಗಳವಾರ ಬೆಳಿಗ್ಗೆ ಕಾರ್ತೀಕ ದೀಪೋತ್ಸವ ಅಂಗವಾಗಿ ಶ್ರೀ ಮಲ್ಲಿಕಾರ್ಜುನ ದೇವರ ರುದ್ರಾಭಿಷೇಕ ಸೇರಿದಂತೆ ಪೂಜೆ ಕೈಂಕರ್ಯ ಗಳು ಜರುಗುತ್ತದೆ.



ನಂತರ ಸಾಯಂಕಾಲ 6ಕ್ಕೆ ಕಾರ್ತೀಕ ದೀಪೋತ್ಸವದ ದೀಪಾರಾಧನೆ ಗಚ್ಚಿನಮಠದ ಶ್ರೀ ಗಳು ಚಾಲನೆ ನೀಡಲಿದ್ದಾರೆ. ನಂತರ ಭಕ್ತ ವೃಂದದವರಿಂದ ದೀಪೋತ್ಸವ ಜರುಗಲಿದೆ.ಈ ಎಲ್ಲಾ ಮಂಗಲಮಯ ಕಾರ್ಯಕ್ರಮದಲ್ಲಿ

ಭಕ್ತಾದಿಗಳು ಭಾಗವಹಿಸಿ ಶ್ರೀ ಮಲ್ಲಿಕಾರ್ಜುನ ದೇವರ ಕೃಪೆಗೆ ಪಾತ್ರರಾಗ ಬೇಕು ಎಂದು ಮಲ್ಲಿಕಾರ್ಜುನ ದೇವರ ಅರ್ಚಕರಾದ ಸಿದ್ದಯ್ಯ ಹಿರೇಮಠ ರವರು ಹಾಗೂದೇವಸ್ಥಾನ ಸಮಿತಿ ಪತ್ರಿಕೆ ಪ್ರಕಟನೆ ಮೂಲಕ ಮನವಿ ಮಾಡಿದರು.

## ಲಿಂಗಸೂಗೂರ ತಾಲೂಕಿನಲ್ಲಿ ಅದ್ದೂರಿ ಹೈನುಗಾರಿಕೆ ಪ್ರಾರಂಭ ಹೈನುಗಾರಿಕೆಗೆ ಮುಂದಾಗಿರುವ NRLM ಸ್ವ ಸಹಾಯ ಗುಂಪಿನ ಮಹಿಳೆಯರು

ಯುವಮಾರ್ಗ ಸುದ್ದಿ

**ಲಿಂಗಸುಗೂರು,ನ.24-** ಹೈನುಗಾರಿಕೆ ಒಂದು ಪ್ರಮುಖ ಉಪಕಸುಬಾಗಿದ್ದು, ಇದರಿಂದ ದಿನನಿತ್ಯ ಆದಾಯಗಳಿಸಲು ಸಾಧ್ಯವಾಗುತ್ತದೆ. ಇತ್ತೀಚೀನ ದಿನಗಳಲ್ಲಿ ಹಲವಾರು ಯುವಕರ ಆಸಕ್ತಿಯಂತೆ ಮಹಿಳೆಯರು ಕೂಡ ಹೈನುಗಾರಿಕೆ ಮಾಡಲು ತಾಲೂಕು ಪಂಚಾಯತ ವ್ಯಾಪ್ತಿಯ ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಯೋಜನೆ ಅಡಿಯಲ್ಲಿರುವ ಸ್ವ ಸಹಾಯ ಗುಂಪಿನ ಮಹಿಳೆಯರು ಹೈನುಗಾರಿಕೆ ಪ್ರಾರಂಭ ಮಾಡಲು ಮುಂದಾಗಿರುವುದು ವಿಶೇಷವಾಗಿರುತ್ತದೆ.

ಲಿಂಗಸೂಗೂರ ತಾಲೂಕಿನದ್ಯಾಂತ ಸುಮಾರು 50-60 ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ ರಚನೆ, 1500 ರಿಂದ 2000 ರವರಿಗೆ ಹಸುಗಳು ಖರೀದಿಸುವ ಗುರಿಯಂತೆ ಸಂಜೀವಿನಿ ಗ್ರಾಮ ಪಂಚಾಯತ ಮಟ್ಟದ ಒಕ್ಕೂಟದ ಸ್ವ ಸಹಾಯ ಸಂಘದ ಮಹಿಳೆಯರಿಗೆ ಒಕ್ಕೂಟದಿಂದ ಸಮುದಾಯದ ಬಂಡವಾಳ ನಿಧಿ ಹಾಗೂ ಬ್ಯಾಂಕ್ ಸಾಲ ಸಂಪರ್ಕ ಮೂಲಕ ಹಸುಗಳು ಖರೀದಿಸಿ ಸಂಪೂರ್ಣ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವುದು. ಗುಂತಗೋಳ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಳಕು ಸಂಜೀವಿನಿ ಗ್ರಾ.ಪಂ ಮಟ್ಟದ ಒಕ್ಕೂಟದ ಪರಿಮಳ ನರಸಮ್ಮ ಹಾಗೂ ದವಲಮಲ್ಲಿಕ ಗುಂಪಿನ ರುಕ್ಷನ ಬೇಗಂ, ಮುನಿರಾಬೇಗಂ, ಮಮತಾಜ್ ಬೇಗಂ ಹಸು ಖರೀದಿಸಿ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡವರು.

ಇಲ್ಲಿನ ರೈತ ಮಹಿಳೆಯರು ಕೂಲಿ ಕೆಲಸದಲ್ಲಿ ಜೀವನ ನಡಿಸದೆ ಕಷ್ಟಕರವಾದಾಗ ಪಟ್ಟಣಕ್ಕೆ ಗುಳೆ ಹೋಗ್ಬೇಕೆನ್ನುವ ಇಂತಹ ಸಂದರ್ಭದಲ್ಲಿ ಸಂಜೀವಿನಿ ಯೋಜನೆ ಸಿಬ್ಬಂದಿಗಳು ಹೈನುಗಾರಿಕೆ ಮಾಹಿತಿ ನೀಡಿದಾಗ ಸ್ವಯಂ ಪ್ರೇರಿತರಾಗಿ ತಮ್ಮ ಅಲ್ಪ ಸ್ವಲ್ಪ ಅವರ ಕೃಷಿ ಜೊತೆ ಉಪಕಸುಬಾಗಿ ಹೈನುಗಾರಿಕೆ ಉದ್ಯಮ ಆರಂಭಿಸಲು ಮುಂದಾದರು.

**ಹಸು ಆಯ್ಕೆ:** ಸ್ಥಳೀಯ ಪರಿಸರಕ್ಕೆ ಹೊಂದಿಕೊಳ್ಳುವ ಮತ್ತು ಉತ್ತಮ ಹಾಲು ಉತ್ಪಾದಿಸುವ ಹಸುಗಳನ್ನು ಸ್ಥಳೀಯ



ಪಶುವೈದ್ಯರ ಮಾಹಿತಿಯಂತೆ ಸೂಕ್ತ ತಳಿಗಳ ಬಗ್ಗೆ ಸಲಹೆ ಪಡೆದು ಎಮ್ಮೆಗಳನ್ನು ಖರೀದಿಸಲು ಮುಂದಾಗಿರುವುದು. ಕೊಟ್ಟಿಗೆ ನಿರ್ಮಾಣ ಮತ್ತು ಆಕಗಳುಗಳ ಖರೀದಿ 2,00,000/-ಲಕ್ಷ ಬಂದಿದೆ, ಮೊದಲಿಗೆ ಐದು (5) ಹಾಲು ಹಿಂಡುವ ಆಕಳು ಮಿಶ್ರತಳಿಗಳನ್ನು ಖರೀದಿಸಿಇದರಿಂದ ಪ್ರತಿದಿನ ಹಾಲಿನ ಕೇಂದ್ರಕ್ಕೆ ಒಂದು ದಿನಕ್ಕೆ ಸುಮಾರು 20 ರಿಂದ 25 ಲೀಟರ ಹಾಲಿನ ಇಳುವರಿ ಪಡೆದು ಸರಾಸರಿ ಪ್ರತಿ ಲೀಟರಗೆ ರೂ. 40-45 ದರದಲ್ಲಿ ಮಾರಾಟ ಮಾಡುತ್ತಿದ್ದು, ಒಂದು ದಿನಕ್ಕೆ ರೂ. 1500 ರಿಂದ 2000 ರವರೆಗೆ ಆದಾಯ ಗಳಿಸುತ್ತಿದ್ದಾರೆ. ಅದರಲ್ಲಿ ಪಶು ಆಹಾರದ ಖರ್ಚು ಮತ್ತು ಔಷಧಿಯ ಖರ್ಚು ಸುಮಾರ ಶೇ. 50 ರಷ್ಟು ಬರುತ್ತದೆ ಎನ್ನುತ್ತಾರೆ ಅವರು.

**ಇವರ ಮನೆ ಸ್ವಂತಃ** ಜಮೀನಿನಲ್ಲಿ ಇರುವುದರಿಂದ ತಾವೇ ತಮ್ಮ ಕುಟುಂಬದವರೊಂದಿಗೆ ಹಾಗೂ ಕೂಲಿ ಆಳುಗಳೊಂದಿಗೆ ಕೂಡಿ ಕೆಲಸ ಮಾಡುತ್ತಾರೆ. ಜಮೀನಿನ ಕೃಷಿಯ ತ್ಯಾಜ್ಯಗಳಾದ, ಗೋವಿನ ಜೋಳದ ನುಚ್ಚು, ತೊಗರಿ ನುಚ್ಚು, ಕಡಲೆ ನುಚ್ಚು, ಗೋದಿ ತವಡು ಉಪಯೋಗಿಸಿ, ದಾಣಿ ಮಿಶ್ರಣವನ್ನು ಮನೆಯಲ್ಲಿಯೇ ತಯಾರು ಮಾಡುತ್ತಾರೆ, ಹಸಿರು ಮೇವಿನ ಕೊರತೆಯಾಗದಂತೆ, ಹೊಲದಲ್ಲಿ ಹನಿ ನೀರಾವರಿ ತಂತ್ರಜ್ಞಾನ ಅಳವಡಿಸಿಕೊಂಡಿದ್ದಾರೆ. ಇವರ ಯಶಸ್ಸನ್ನು ನೋಡಿ ಈ ಪಂಚಾಯತ್ ವ್ಯಾಪ್ತಿಯ ಎಲ್ಲಾ ಮಹಿಳೆಯರು ಸಂಜೀವಿನಿ ಸ್ವ ಸಹಾಯ ಗುಂಪು ಸೇರಲು ಬಯಸಿ ಹಸುಗಳು ಖರೀದಿಗಾಗಿ ಸಾಲದ ಬೇಡಿಕೆ ಸಲ್ಲಿಸಿದ್ದಾರೆ.

## ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರ ಬಿಡುಗಡ

**ರಾಯಚೂರು,ನ.24-** ಲಿಂಗಸೂಗೂರು ತಾಲೂಕಿನ ಮುದಗಲ್‌ನ ಪಿ.ಎಂ. ಶ್ರೀ ಜವಾಹರ್ ನವೋದಯ ವಿದ್ಯಾಲಯದಿಂದ 2026-27ನೇ ಶೈಕ್ಷಣಿಕ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ನಡೆಯುವ ಜೆಎನ್‌ವಿಎಸ್‌ಟಿ 2026 ಪ್ರವೇಶ ಪರೀಕ್ಷೆಯು 2026ರ ಡಿಸೆಂಬರ್ 13ರಂದು ನಡೆಯಲಿದೆ.

ಈ ಹಿನ್ನಲೆಯಲ್ಲಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಬಿಡುಗಡೆ ಮಾಡಲಾಗಿದ್ದು, ಅರ್ಹ ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರಗಳನ್ನು ಅಧಿಕೃತ ಲಿಂಕ್‌ಗಳು https://cbseitms.rcil.gov.in/nvs/ , https://navodaya.gov.in/ ಮೂಲಕ ಡೌನ್‌ಲೋಡ್ ಮಾಡಬಹುದಾಗಿದೆ ಎಂದು ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರಾದ ಎಂ. ಮುನೇಂದ್ರ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಸೆಂಬರ್ 13ರಂದು ರಾಷ್ಟ್ರೀಯ ಲೋಕ ಅದಾಲತ್

**ರಾಯಚೂರು,ನ.24-** ರಾಯಚೂರು ಜಿಲ್ಲಾ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳ ನ್ಯಾಯಾಲಯಗಳಲ್ಲಿ ಡಿಸೆಂಬರ್ 13ರಂದು ಬೆಳಗ್ಗೆ 10 ಗಂಟೆಗೆ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದೆ.

ಲೋಕ ಅದಾಲತ್‌ನ ನ್ಯಾಯಾಲಯದಲ್ಲಿ ಬಾಕಿ ಇರುವ ಸಿವಿಲ್ ಮತ್ತು ಕ್ರಿಮಿನಲ್ (ರಾಜಿಯಾಗುವಂತಹ) ಮೊಕದಮ್ಮೆಗಳ ಜೊತೆಗೆ ಮೋಟಾರ ವಾಹನ ಪ್ರಕರಣಗಳು ಮತ್ತು ಎಲ್ಲಾ ಬಗೆಯ ಪ್ರಕರಣಗಳನ್ನು (ಕೇಸುಗಳನ್ನು) ಲೋಕ ಅದಾಲತ್ ಮುಖಾಂತರ ಇತ್ಯರ್ಥಗೊಳಿಸಲಾಗುವುದು. ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು (ಕೇಸುಗಳನ್ನು) ರಾಷ್ಟ್ರೀಯ ಲೋಕ ಅದಾಲತ್ ಮೂಲಕ ಇತ್ಯರ್ಥಪಡಿಸಿಕೊಳ್ಳಲು ವಕೀಲರು ಹಾಗೂ ಕಕ್ಷಿದಾರರಿಗೆ ಸದಾವಕಾಶ ಒದಗಿಸಲಾಗಿದೆ.

ಆದ್ದರಿಂದ ಎಲ್ಲಾ ವಕೀಲರು, ಕಕ್ಷಿದಾರರು, ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ವ್ಯಾಜ್ಯಪೂರ್ವ ಎಲ್ಲಾ ಬಗೆಯ ಕೇಸುಗಳನ್ನು ಲೋಕ ಅದಾಲತನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇತ್ಯರ್ಥಪಡಿಸಿಕೊಳ್ಳಲು ಈ ಮೂಲಕ ಕೋರಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಆಗಿರುವ ಗೌರವಾನ್ವಿತ ಹಿರಿಯ ಶ್ರೇಣಿಯ ದಾವಾಣಿ ನ್ಯಾಯಾಧೀಶರಾದ ಹೆಚ್ ಎ ಸಾತ್ವಿಕ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೂಗೂರೇಶ್ವರ ಜಾತ್ರೆ: ಮದ್ಯೆ ಮಾರಾಟ ನಿಷೇಧ

**ರಾಯಚೂರು,ನ.24-** ರಾಯಚೂರು ತಾಲೂಕಿನ ದೇವಸಗೂರು ಗ್ರಾಮದ ಶ್ರೀ ಸೂಗೂರೇಶ್ವರ ಸ್ವಾಮಿ ದೇವಸ್ಥಾನದ ಜಾತ್ರೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾನೂನು, ಶಾಂತಿ, ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಹಾಗೂ ಜಾತ್ರೆಯು ಸುಗಮವಾಗಿ ನಡೆಯಲು ಮುಂಜಾಗ್ರತಾ ಕ್ರಮವಾಗಿ

ನವೆಂಬರ್ 25ರ ಬೆಳಿಗ್ಗೆ 06 ಗಂಟೆಯಿಂದ ನವೆಂಬರ್ 27ರ ಬೆಳಿಗ್ಗೆ 06 ಗಂಟೆವರೆಗೆ ಶಕ್ತಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರೀತಿಯ ಮದ್ಯೆ ತಯಾರಕಾ ಘಟಕಗಳು, ಸಾಗಣೆ ಮತ್ತು ಸಂಗ್ರಹಣೆಯನ್ನು ಮಾರಾಟ ಮಳಿಗೆಯನ್ನು ಬಂದ್ ಇಡುವುಂತೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

## ಕೋಣಚಪ್ಪಳಿ ಗ್ರಾಮದ ಕೃಷಿ ಮತ್ತು ಗ್ರಾಮೀಣ ಕಾರ್ಮಿಕ ಸಂಘದ ಪದಾಧಿಕಾರಿಗಳ ಆಯ್ಕೆ



ಯುವಮಾರ್ಗ ಸುದ್ದಿ

**ದೇವದುರ್ಗ,ನ.24-** ದೊಂಡಬಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೋಣಚಪ್ಪಳಿ ಗ್ರಾಮದಲ್ಲಿ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಗ್ರಾಮ ಘಟಕ ಮಾಡಲಾಯಿತು.

ಅಧ್ಯಕ್ಷರಾಗಿ ಶರಣಬಸವ,ಪ್ರಧಾನ ಕಾರ್ಯದರ್ಶಿಯಾಗಿ ನಾಗಲಿಂಗ ಸೇರಿದಂತೆ 14 ಜನ ಸದಸ್ಯರ ಸಮಿತಿಯನ್ನು ಸಭೆಯೂ ಸರ್ವಾನುಮತದಿಂದ ಆಯ್ಕೆ ಮಾಡಿದೆ ಎಂದು ತಾಲ್ಲೂಕ ಸಮಿತಿ ಅಧ್ಯಕ್ಷ ಲಿಂಗಣ್ಣ ಮಕಾಶಿ ಪತ್ರಿಕೆಗೆ ತಿಳಿಸಿದರು.

ಕೃಷಿ ಕೂಲಿಕಾರರಿಗೆ ನರೇಗಾ ಯೋಜನೆಯಡಿ 200 ದಿನ ಕೆಲಸ ನೀಡಬೇಕು, 600 ಕೂಲಿ ನಿಗದಿ ಮಾಡಬೇಕು, 60 ವರ್ಷ ಮೇಲ್ಪಟ್ಟ ಹಿರಿಯ ಕೂಲಿಕಾರರಿಗೆ ಪಿಂಚಣಿ ಸೌಲಭ್ಯ ನೀಡಬೇಕು ಎಂದು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H